# ಶ್ರೀ ಶಿವಾಪರಾಧಕ್ಷಮಾಪಣಸ್ತೋತ್ರ

( ಕನ್ನಡ ವಿವರಣೆ ಸಹಿತ )



ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ

೧೯೯೭

# ಅಧ್ಯಾತ್ಮಪ್ರಕಾಶಕಾರ್ಯಾಲಯ

(ಪಬ್ಲಿಕ್ ಛಾರಿಟಬಲ್ ಟ್ರಸ್ಟ್)
ಹೊಳೆನರಸೀಪುರ - ೫೭೩೨೧೧
ದೂರವಾಣಿ: ೦೮೧೭೫ - ೭೩೮೨೦

## ಈ ಕಾರ್ಯಾಲಯದಿಂದ ತಾವು ಯಾವಯಾವ ಲಾಭವನ್ನು ಪಡೆಯಬಹುದು?

೧. ಕಾರ್ಯಾಲಯದಲ್ಲಿ ನಡೆಯುತ್ತಿರುವ ಪೂಜೆ, ಭಜನೆ, ಪುರಾಣ ಶ್ರವಣ, ಉಪನ್ಯಾಸಗಳು, ಅನುಷ್ಠಾನಗಳು - ವೇದಾಂತಸಪ್ತಾಹ, ವೇದಾಂತಶಿಬಿರ ಇವುಗಳಲ್ಲಿ ಯಥಾಶಕ್ತಿಯಾಗಿ ಭಾಗವಹಿಸಬಹುದು.

೨. ಇಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯ ಗ್ರಂಥಗಳನ್ನು ಕೊಂಡು ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

೩. ಕಾರ್ಯಾಲಯದಲ್ಲಿ ಪ್ರಕಟವಾಗುವ **"ಅಧ್ಯಾತ್ಮಪ್ರಕಾಶ"** ಮಾಸಪತ್ರಿಕೆಗೆ ಚಂದಾದಾರರಾಗಿ ತಿಂಗಳುತಿಂಗಳೂ ಬಗೆಬಗೆಯ ಅಧ್ಯಾತ್ಮಬೋಧೆಯನ್ನು ಪಡೆಯಬಹುದು.

೪. ಕಾರ್ಯಾಲಯದಲ್ಲಿ ಬರೆದು ಸಿದ್ಧವಾಗಿರುವ ಪುಸ್ತಕಗಳ ಪ್ರಕಟನೆಗೆ ಯಥಾಶಕ್ತಿಯಾಗಿ ಧನಸಹಾಯವನ್ನು ಮಾಡಿ ಮಹಾಶ್ರಯದಾತರು, ಆಶ್ರಯದಾತರು, ಅಥವಾ ಮಹಾಪೋಷಕರು - ಎನಿಸಿ, ಪುಣ್ಯವನ್ನೂ, ಕೀರ್ತಿಯನ್ನೂ ಸಂಪಾದಿಸಿಕೊಳ್ಳಬಹುದು; ಈ ಪ್ರಕಟನೆಗಳ ಪುಸ್ತಕ ಭಂಡಾರವನ್ನು ಏರ್ಪಡಿಸಿಕೊಳ್ಳಬಹುದು.

೫. ಕಾರ್ಯಾಲಯದಲ್ಲಿರುವ ವಿದ್ಯಾಲಯಕ್ಕೆ ಯೋಗ್ಯರಾದ ವಿದ್ಯಾರ್ಥಿಗಳನ್ನು ಕಳುಹಿಸಿ ಅಧ್ಯಾತ್ಮವಿದ್ಯೆಯಲ್ಲಿ ಪ್ರವೀಣರನ್ನಾಗಿ ಮಾಡಿಸಿ ಅವರಿಂದ ನಿಮ್ಮ ಪ್ರಾಂತ್ಯದಲ್ಲಿ ಬ್ರಹ್ಮವಿದ್ಯಾಪ್ರಚಾರವನ್ನು ಮಾಡಿಸಬಹುದು.

೬. ಕಾರ್ಯಾಲಯದ ಕಟ್ಟಡಕ್ಕೂ, ವಿದ್ಯಾನಿಲಯ, ಪೂಜಾಮಂದಿರ, ಗುರುಮಂದಿರ, ಪುಸ್ತಕಭಂಡಾರ - ಇವಕ್ಕೂ ಯಥೋಚಿತವಾಗಿ ಸಹಾಯವನ್ನು ಮಾಡಿ ಪುಣ್ಯವನ್ನು ಗಳಿಸಿಕೊಳ್ಳಬಹುದು.

ಹೆಚ್ಚಿಗೆ ವಿಷಯಕ್ಕೆ ಕಾರ್ಯದರ್ಶಿಗಳಿಗೆ ಬರೆಯಿರಿ.

ಅಧ್ಯಾತ್ಮಗ್ರಂಥಾವಳಿ

# ಶ್ರೀ ಶಿವಾಪರಾಧಕ್ಷಮಾಪಣಸ್ತೋತ್ರ

(ಕನ್ನಡ ವಿವರಣೆ ಸಮೇತ)

ಬರೆದವರು:
ಅಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ
**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ**

ಕ್ರಮಾಂಕ ೧೯೫

ಪ್ರಕಾಶಕರು:
**ಅಧ್ಯಾತ್ಮಪ್ರಕಾಶಕಾರ್ಯಾಲಯ**
ಹೊಳೆನರಸೀಪುರ
೧೯೯೭

ಒಂದನೆಯ ಮುದ್ರಣ (೧೯೮೯)
(೧೦೦೦ ಪ್ರತಿಗಳು)

ಎರಡನೆಯ ಮುದ್ರಣ (೧೯೯೭)
(೨೦೦೦ ಪ್ರತಿಗಳು)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಬೆರಳಚ್ಚು ಮತ್ತು ಮುದ್ರಣ:
**ಲೇಸರ್ ಗ್ರಾಫಿಕ್ಸ್**
ಟಿ. ಆರ್. ನಗರ, ಬೆಂಗಳೂರು-೫೬೦ ೦೨೮
✆ : 6675369

# ಮುನ್ನುಡಿ

ಶಿವಾಪರಾಧಕ್ಷಮಾಪಣಸ್ತೋತ್ರವು ಶ್ರೀ ಶಂಕರಾಚಾರ್ಯರ ಕೃತಿಯೆಂದು ಪ್ರಸಿದ್ಧವಾಗಿದೆ. ಇದು ಶ್ರೀರಂಗಂ ವಾಣೀವಿಲಾಸಮುದ್ರಣಾಲಯದವರು ಪ್ರಕಟಿಸಿರುವ ಶ್ರೀ ಶಂಕರಾಚಾರ್ಯರ ಗ್ರಂಥಾವಳಿಯ ಸ್ತೋತ್ರವಿಭಾಗದಲ್ಲಿಯೂ ಸೇರಿದೆ. ಇದರಲ್ಲಿರುವ ವಿಚಾರಗಳು ಅಧ್ಯಾತ್ಮಸಾಧಕರಿಗೆ ಪಥ್ಯವೂ ಹಿತವೂ ಆಗಿದ್ದು ಅನುಭವಗಮ್ಯವಾಗಿದೆ. ಮಾನವನು ತನ್ನ ಆಯುಷ್ಯವನ್ನೆಲ್ಲ ಹುಡುಕಿದರೂ ಭಗವಂತನ ಅರ್ಚನೆ, ಧ್ಯಾನ, ಪೂಜಾದಿಗಳಿಗೆ ಮಾತ್ರ ಸಮಯವೇ ದೊರಕದೆ ಇದ್ದು ಬಹಳ ತೀವ್ರವಾದ ಅಪರಾಧವನ್ನು ತಾನು ಮಾಡಿರುವದಾಗಿಯೂ ಅದನ್ನು ಸರ್ವಜ್ಞನಾದ ಶಿವನು ಕ್ಷಮಿಸಬೇಕೆಂದೂ ಕೇಳಿಕೊಂಡಿರುವ ಸನ್ನಿವೇಶವು ಹೃದಯಂಗಮವಾಗಿದೆ. ವೇದಾಂತಶಾಸ್ತ್ರದ ಯಾವದೇ ಪ್ರಧಾನಪ್ರಕ್ರಿಯೆಯೂ ಇಲ್ಲಿ ಪ್ರತಿಪಾದಿತವಾಗಿಲ್ಲವಾದರೂ ಸಾಧಕನಿಗೆ ಶಿವಾರಾಧನೆಯು ಅತ್ಯಗತ್ಯವಾದ ಮೋಕ್ಷಸಾಧನವೆಂಬುದನ್ನು ರೂಪಾಂತರದಿಂದ ತಿಳಿಸಲಾಗಿದೆ. ಹೀಗೆ ಜನಪ್ರಿಯವಾಗಿದ್ದು ಶಿವನಲ್ಲಿ ಭಕ್ತಿಯನ್ನುಂಟುಮಾಡುವ ಹಾಗೂ ಶಿವಶರಣಾಗತಿಯನ್ನು ಧ್ಯೇಯವಾಗಿ ಉಳ್ಳ ಈ ಸ್ತೋತ್ರವನ್ನು ಕನ್ನಡ ವಿವರಣೆ ಸಮೇತವಾಗಿ ಬರೆದು ಈಗ ಪ್ರಕಟಿಸಲಾಗಿದೆ.

ಈ ಗ್ರಂಥವನ್ನು ಮೊಟ್ಟಮೊದಲು ಬರೆಯಲು ಪ್ರೇರೇಪಿಸಿದವರು ಮೈಸೂರು ಜಯಲಕ್ಷ್ಮೀಪುರಂನಲ್ಲಿರುವ ಶ್ರೀಮತಿ ನಾಗಮ್ಮ ಶಂಕರರಾವ್‌ರವರು. ಅವರು ಇದರ ಮೊದಲನೆಯ ಮುದ್ರಣದ ಸಂಪೂರ್ಣ ಖರ್ಚುವೆಚ್ಚಗಳನ್ನೆಲ್ಲ ವಹಿಸಿಕೊಂಡು ಐದುನೂರು ಪ್ರತಿ ಗ್ರಂಥಗಳನ್ನು ಕಾರ್ಯಾಲಯಕ್ಕೆ ದಾನವಾಗಿ ಸಮರ್ಪಿಸಿದ್ದರು. ಈಗ ಎರಡನೆಯ ಮುದ್ರಣವನ್ನು ಹೊರತರುವ ಸಂದರ್ಭದಲ್ಲಿ ಮತ್ತೆ ಅವರನ್ನು ಸಂಪರ್ಕಿಸಿದಾಗ ಶ್ರೀಮತಿ ನಾಗಮ್ಮನವರು ಮತ್ತು ಅವರ ಸುಪುತ್ರರಾದ ಡಾಕ್ಟರ್ ಎನ್. ಶ್ರೀರಾಮ್‌ರವರು ಸಹ ಸಂತೋಷದಿಂದ ಈ ಎರಡನೆಯ ಮುದ್ರಣಕ್ಕೂ ಕಾಗದದ ಮೂಲ್ಯಕ್ಕಾಗಿ ಮೂರುಸಾವಿರ ರೂಪಾಯಿಗಳನ್ನು ಉದಾರವಾಗಿ ದಾನಮಾಡಿರುತ್ತಾರೆ. ಇವರಿಗೂ ಇವರ ಕುಟುಂಬ ವರ್ಗಕ್ಕೂ ಭಗವಾನ್ ಶ್ರೀಪರಮೇಶ್ವರನು ಸಕಲ ಸನ್ಮಂಗಳ ಪರಂಪರೆಗಳನ್ನು ದಯಪಾಲಿಸಲೆಂದು ನಾನು ಪ್ರಾರ್ಥಿಸುತ್ತೇನೆ.

ಅಧ್ಯಾತ್ಮಪ್ರಕಾಶಕಾರ್ಯಾಲಯವು ಸ್ಥಾಪಿತವಾಗಿರುವದೇ ಅಧ್ಯಾತ್ಮಸಾಹಿತ್ಯ ಪ್ರಚಾರಕ್ಕಾಗಿ-ಎಂಬಿದು ಮಹಾಜನರಿಗೆ ತಿಳಿದೇ ಇದೆ. ಈ ಸಂಸ್ಥೆಯು ಈವರೆಗೆ ಕೇವಲ ಅಧ್ಯಾತ್ಮ ಪ್ರಿಯರಾದ ದಾನಿಗಳ ಸಹಾಯದಿಂದಲೇ ಎರಡು ನೂರಕ್ಕೂ ಮೀರಿದ ಸಂಖ್ಯೆಯ ಅಧ್ಯಾತ್ಮಗ್ರಂಥಗಳನ್ನು ಪ್ರಕಟಿಸಿರುತ್ತದೆ. ಇವುಗಳಲ್ಲಿ ಜನಪ್ರಿಯವಾದ ಕೆಲವು ಪುಸ್ತಕಗಳು ಪುನರ್ಮುದ್ರಣವಾಗಬೇಕಾಗಿದೆ. ಅಧ್ಯಾತ್ಮಗ್ರಂಥಗಳ ಮಾರಾಟವು ಇತರ ಪ್ರಕಟಣೆಗಳಂತೆ ಕೂಡಲೆ ಫಲಕಾರಿಯಲ್ಲ. ಆದ್ದರಿಂದ ಒಂದು ಹೊಸ ಪುಸ್ತಕವನ್ನು ಹೊರತರಬೇಕಾದರೆ ಉದಾರಾಶಯರ ನೆರವು ದೊರಕುವವರೆಗೂ

ಕಾಯಬೇಕು. ಹೀಗಿರುವದರಿಂದ ಅಧ್ಯಾತ್ಮಪ್ರಿಯರೂ ಶ್ರೀಮಂತರೂ ಆದ ವಾಚಕಮಹಾಶಯರುಗಳು ತಮ್ಮ ಉದಾರವಾದ ಕಾಣಿಕೆಗಳನ್ನು ಕಳುಹಿಸಿಕೊಟ್ಟು ಹೊಸಹೊಸ ಗ್ರಂಥಗಳ ಪ್ರಕಟಣೆಗೆ ಪ್ರೋತ್ಸಾಹವನ್ನು ನೀಡಬೇಕಾಗಿ ಪ್ರಾರ್ಥನೆ.

ಕಾರ್ಯಾಲಯದ ಉಳಿದ ಪ್ರಕಟಣೆಗಳಂತೆಯೇ ಈ ಗ್ರಂಥವನ್ನೂ ವಾಚಕರು ಆದರದಿಂದ ಬರಮಾಡಿಕೊಂಡು ಓದಿ ನಮ್ಮನ್ನು ಪ್ರೋತ್ಸಾಹಿಸುವರೆಂದು ನಂಬಿದ್ದೇನೆ.

ಇತಿ-


ಸಜ್ಜನವಿಧೇಯ,

**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ**

ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

ಹೊಳೆನರಸೀಪುರ

ತಾ|| 1-8-1997



ಶಂಕರಂ ಶಂಕರಾಚಾರ್ಯಂ ಕೇಶವಂ ಬಾದರಾಯಣಮ್।
ಸೂತ್ರಭಾಷ್ಯಕೃತೌ ವಂದೇ ಭಗವಂತೌ ಪುನಃ ಪುನಃ॥

॥ ಓಂ ॥

# ಶ್ರೀ ಶಿವಾಪರಾಧಕ್ಷಮಾಪಣಸ್ತೋತ್ರ

(ಮೂಲ)

***ಆದೌ ಕರ್ಮಪ್ರಸಂಗಾತ್ ಕಲಯತಿ ಕಲುಷಂ ಮಾತೃಕುಕ್ಷೌ ಸ್ಥಿತಂ ಮಾಂ***
***ವಿಣ್ಮೂತ್ರಾಮೇಧ್ಯಮಧ್ಯೇ ಕ್ವಥಯತಿ ನಿತರಾಂ ಜಾಠರೋ ಜಾತವೇದಾಃ ।***
***ಯದ್ಯದ್ವೈ ತತ್ರ ದುಃಖಂ ವ್ಯಥಯತಿ ನಿತರಾಂ ಶಕ್ಯತೇ ಕೇನ ವಕ್ತುಂ***
***ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ***
***ಶ್ರೀ ಮಹಾದೇವ ಶಂಭೋ ॥೧॥***

೧. "ಪೂರ್ವಾರ್ಜಿತಕರ್ಮಗಳ ನಿಮಿತ್ತವಾದ ಪಾಪವು ನನ್ನನ್ನು ಪ್ರಾರಂಭದಲ್ಲಿ ತಾಯಿಯ ಹೊಟ್ಟೆಯಲ್ಲಿ ಪ್ರವೇಶಿಸುವಂತೆ ಸಂಘಟನೆಮಾಡುತ್ತದೆ. ಅಲ್ಲಿ ನಾನಿರುವಾಗ (ಗರ್ಭವಾಸ ಕಾಲಕ್ಕೆ) ಹೊಟ್ಟೆಯಲ್ಲಿರುವ ಜಠರಾಗ್ನಿಯು ಬಹಳವಾಗಿ ತಾಪಗೊಳಿಸುತ್ತಾನೆ. ಆ ಜಾಗದಲ್ಲಿ ಮೂತ್ರಪುರೀಷಾದಿ ಅಪವಿತ್ರ ವಸ್ತುಗಳ ನಡುವೆ ನನಗೆ ಕಾಲಕಳೆಯಬೇಕಾದ ಸ್ಥಿತಿಯಿರುವದು. ಇನ್ನು ಮಾತೃಗರ್ಭದಲ್ಲಿರುವಾಗ ನನಗೆ ಏನೇನು ದುಃಖಗಳು ಸಂಭವಿಸುವವೋ ಅವುಗಳನ್ನು ಹೇಳಲು ಯಾರಿಂದ ತಾನೆ ಸಾಧ್ಯವಾದೀತು? ಹೀಗಿರುವಲ್ಲಿ ಶಿವನನ್ನು ಆಗ ನಾನು ನೆನೆಯಲಾರದೇ ಹೋದೆನು. ಭೋ ಮಹಾದೇವ, ಶಂಭೋ, ಶಿವ, ಈ ನನ್ನ ಅಪರಾಧವನ್ನು ನೀನು ಕ್ಷಮಿಸಬೇಕು".

## ವಿವರಣೆ

ಈ ಸ್ತೋತ್ರವನ್ನು ಶ್ರೀಶಂಕರಭಗವತ್ಪಾದರವರು ರಚಿಸಿದ್ದಾರೆಂದು ಬಹು ಜನರ ಅಭಿಪ್ರಾಯವಿದೆ. ಕೆಲವರು ಇದು ಶಂಕರಾಚಾರ್ಯರ ಕೃತಿಯಲ್ಲವೆಂದೂ ಹೇಳುವರು. ಭಗವತ್ಪಾದರ ಕಾಲಕ್ಕೂ ನಮ್ಮ ಕಾಲಕ್ಕೂ ಅಂತರವು ಬಹಳವಾಗಿರುವದರಿಂದಲೂ ಶ್ರೀಶಂಕರಾಚಾರ್ಯರ ಅವತಾರಕಾಲದ ವಿಷಯದಲ್ಲಿಯೇ ಈಗಲೂ ವಿದ್ವಾಂಸರುಗಳಲ್ಲಿಯೂ ಮಠಾಧಿಪತಿಗಳ ಗುರುಪರಂಪರೆಯ ದಾಖಲೆಗಳಲ್ಲಿಯೂ ಮತಭೇದವಿರುವದರಿಂದಲೂ ನಾನು ಈ ಸ್ತೋತ್ರದ ಕರ್ತೃಗಳ ವಿಷಯಕ್ಕೆ ಏನೂ ಹೇಳಲಾರದವನಾಗಿದ್ದೇನೆ. ಶ್ರೀಶಂಕರಾಚಾರ್ಯರ ಕೃತಿಗಳಿಗೆ ಆಸ್ತಿಕರ ಸಮಾಜದಲ್ಲಿ ಅತಿ ಹೆಚ್ಚಿನ ಗೌರವವೂ ಪ್ರಾಶಸ್ತ್ಯವೂ ಇದ್ದ ಕಾಲಕ್ಕೆ ಯಾರಾದರೂ ಕವಿಗಳು ಈ ಸ್ತೋತ್ರವನ್ನು ರಚಿಸಿ ಆಚಾರ್ಯರ ಹೆಸರಿನಲ್ಲಿ ಪ್ರಚಾರಕ್ಕೆ ತಂದಿರಲೂಬಹುದು. ಸದ್ಯಕ್ಕೆ ಈ ಸ್ತೋತ್ರವು ಶ್ರೀರಂಗಂ ವಾಣೀವಿಲಾಸ ಮುದ್ರಣಾಲಯದವರು ಪ್ರಕಟಿಸಿರುವ ಶಂಕರಾಚಾರ್ಯರ

ಕೃತಿರತ್ನಗಳ ಮಾಲೆಯಲ್ಲಿ ಸೇರಿರುವದರಿಂದ ಆಚಾರ್ಯರ ಕೃತಿಯೇ -ಎಂದು ಭಾವಿಸಿ ಇದರ ತಾತ್ಪರ್ಯಾರ್ಥವನ್ನು ವಿಚಾರಮಾಡೋಣ.

ಮಾನವಜನ್ಮವು ಜೀವನಿಗೆ ದುರ್ಲಭವು. ಪಾಪಪುಣ್ಯಗಳ ಸಮಾನತೆಯು ಒದಗಿದಾಗ ಮನುಷ್ಯಜನ್ಮವು ಬರುವದು. ಹಾಗಿಲ್ಲದೆ ಪಾಪವೇ ಅಧಿಕವಾದರೆ ಪಶುಪಕ್ಷ್ಯಾದಿಜನ್ಮಗ್ಗಳೂ ಪುಣ್ಯವು ಹೆಚ್ಚಾದರೆ ದೇವತಾದಿಗಳ ಜನ್ಮವೂ ಉಂಟಾಗುವದು. ಹೀಗೆ ಅಪೂರ್ವವಾಗಿ ಒದಗಿಬರುವ ಮನುಷ್ಯಜನ್ಮದಲ್ಲಿ ಮೊದಲಿಗೆ ಮಾತೃಗರ್ಭಪ್ರವೇಶವೇ ದುರ್ಲಭವಾಗಿರುವದು. ಕರ್ಮಪ್ರಸಂಗದಿಂದ-ಎಂದರೆ ಧರ್ಮಾಧರ್ಮಗಳ ಸಾಮ್ಯದಿಂದ ಜೀವನು ತಾಯಿಯ ಹೊಟ್ಟೆಯನ್ನು ಹೊಕ್ಕಾಗ ಅವನಿಗೆ ಕ್ರಮವಾಗಿ ಶರೀರಾವಯವಗಳು ಸೃಷ್ಟಿಯಾಗಿ ಎಂಟನೆಯ ತಿಂಗಳವೇಳೆಗೆ ಪೂರ್ಣವಾಗಿ ರೂಪಿಸಿಕೊಳ್ಳುವನು. ಆಗ ಗರ್ಭದಲ್ಲಿಯೇ ಅವನಿಗೆ ಜ್ಞಾನೋದಯವೂ ಆಗುವದು. ಅಂಥ ಜೀವನು ತನ್ನ ಪರಿಸ್ಥಿತಿಯನ್ನು ಪರಮೇಶ್ವರನಲ್ಲಿ ನಿವೇದಿಸುತ್ತಿರುವಂತೆ ಭಾವಿಸಿ ಈ ಶ್ಲೋಕವನ್ನು ಹೆಣೆಯಲಾಗಿದೆ. ಅತ್ಯಂತ ಅಮೂಲ್ಯವಾದ ಮನುಷ್ಯಜನ್ಮವನ್ನೇನೋ ತಳೆದದ್ದಾಯಿತು. ಆದರೆ ಶಿವನನ್ನು ಮಾತ್ರ ನೆನೆಯದೆ ಅಪರಾಧಮಾಡಿರುತ್ತೇನಾಗಿ ಆ ಮಹಾದೇವನಾದ ಶಂಭುವು ನನ್ನ ಈ ಅಪರಾಧವನ್ನು ಮನ್ನಿಸಲಿ-ಎಂದು ಜೀವನು ಇಲ್ಲಿ ಬೇಡಿರುತ್ತಾನೆ.

ಗರ್ಭವಾಸಕಾಲಕ್ಕೆ ಉಳಿದ ಪ್ರಾಪಂಚಿಕ ಆಕರ್ಷಣೆಗಳಾಗಲಿ ವ್ಯಾಮೋಹವಾಗಲಿ ಇರಲಿಲ್ಲವಾದ್ದರಿಂದ ಶಿವನನ್ನು ನೆನೆಯಲು ಏನು ಅಡ್ಡಿಯಾಗಿತ್ತು? ಎಂದರೆ ಗರ್ಭವಾಸವು ಬಹಳ ಅಸಹ್ಯಕರವಾಗಿದೆ-ಎಂದು ತಿಳಿಸಲಾಗಿದೆ. ತೀರ ಸಂಕುಚಿತವಾದ ಆ ಜಾಗದಲ್ಲಿ ತಾಯಿಯ ಶರೀರದ ರಕ್ತ, ಕೊಳಕು, ಶರೀರಮಲಗಳ ನಡುವೆ ತಾನಿರುವ ಸ್ಥಿತಿಯು ಅತಿ ಗಂಭೀರವೂ ಇನ್ನೆಂದೂ ಅಂಥ ಸ್ಥಿತಿಯು ಬೇಡವೆಂದೂ ಅನಿಸಿರುವದು. ಜೊತೆಗೆ ತಾಯಿಯ ಹೊಟ್ಟೆಯಲ್ಲಿರುವಾಗ ಆಕೆಯ ಜಠರಾಗ್ನಿಯು ತೀವ್ರವಾದ ತಾಪವನ್ನುಂಟುಮಾಡುತ್ತಿರುವನು. ಗರ್ಭಿಣಿಯಾದವಳು ಸೇವಿಸುವ ಬಿಸಿಪದಾರ್ಥಗಳು, ಕಟುವಾದ ಆಹಾರವಸ್ತುಗಳಿಂದಲೂ ಜೀವನು ವ್ಯಥೆಪಡುವನು. ಹೀಗೆ ಗರ್ಭದಲ್ಲಿದ್ದಾಗ ಆಗಬಹುದಾದ ದುಃಖಗಳ ವಿಷಯಕ್ಕೆ ವರ್ಣನೆಮಾಡಿ ಹೇಳುವದೇ ಸಾಧ್ಯವಾಗಲಾರದು. 'ಏತಕ್ಕಾದರೂ ಇಂಥ ಗರ್ಭವಾಸವು ಒದಗಿತೋ ಕಾಣೆನು. ಇಲ್ಲಿಂದ ಬಿಡುಗಡೆಯಾದದ್ದೇ ಆದರೆ ಇನ್ನೆಂದೂ ಇಂಥ ದುಃಖಫಲಪ್ರದವಾದ ಕರ್ಮವನ್ನು ಮಾಡೆನು; ಶ್ರೀ ಪರಮೇಶ್ವರನನ್ನು ಮರೆಯುವದಿಲ್ಲ' ಎಂದೇ ಆಗ ಜೀವನು ತೊಳಲುತ್ತಿರುವನು. ಹೀಗಿರುವಲ್ಲಿ ಗರ್ಭದಲ್ಲಿರುವಾಗ ನಿಶ್ಚಲವಾದ ಮನಸ್ಸಿನಿಂದ ಶಿವನನ್ನು ನೆನೆಯಲಾದೀತೆ? ಆಗಿನ ಸ್ಥಿತಿಯಲ್ಲಿ ಬಿಡುಗಡೆಯೊಂದನ್ನು ಬಿಟ್ಟರೆ ಮತ್ತೇನೂ ಬೇಕಿರುವದಿಲ್ಲ. ಗೌರವಸ್ಥನಾದ ಯಾವನಾದರೊಬ್ಬನು ಅಕಸ್ಮಾತ್ತಾಗಿ ಜೈಲುವಾಸವನ್ನು ಅನುಭವಿಸಬೇಕಾಗಿ ಬಂದರೆ ಆಗ ಅವನನ್ನು "ನಿಮ್ಮ ಹುಡುಗನ ಮಧುವೆ ಯಾವಾಗ?" ಎಂದರೆ ಅವನೇನು

ಉತ್ತರವನ್ನು ಕೊಟ್ಟಾನು? 'ಅಯ್ಯ, ಮೊದಲು ಈ ಬಂಧನದಿಂದ ಬಿಡುಗಡೆಯಾಗಲಿ; ಅನಂತರ ಶುಭಕಾರ್ಯವನ್ನು ಕುರಿತು ಚಿಂತಿಸೋಣ' ಎನ್ನುವದಿಲ್ಲವೆ? ಹಾಗೆಯೇ ಜೀವನೂ ಗರ್ಭವಾಸಕಾಲಕ್ಕೆ ಅದರಿಂದ ಬಿಡುಗಡೆಯೊಂದನ್ನೇ ಚಿಂತಿಸುತ್ತಾ ಶಿವಚಿಂತನೆಯನ್ನು ಕೈಬಿಟ್ಟಿರುತ್ತಾನೆ. ಆದರೆ ಹಿಂದೆ ಶಿವಧ್ಯಾನವನ್ನು ಕೈಗೊಳ್ಳದ್ದರ ಫಲವಾಗಿಯೇ ಇಂಥ ಸ್ಥಿತಿಯುಂಟಾಯಿತೆಂದೂ ಆ ಕಾಲಕ್ಕೆ ಅವನಿಗೆ ತಿಳಿದಿರುವದಿಲ್ಲ. ಹೇಗೂ ಶಿವಧ್ಯಾನವು ಮಾತ್ರ ಗರ್ಭವಾಸಕಾಲಕ್ಕೆ ತನಗೆ ಸಾಧ್ಯವಾಗದೆ ಹೋದದ್ದಕ್ಕಾಗಿ ತನ್ನನ್ನು ಕ್ಷಮಿಸಬೇಕೆಂದು ಶಿವನನ್ನು ಇಲ್ಲಿ ಪ್ರಾರ್ಥಿಸಿರುತ್ತಾನೆ. ಹಾಗಾದರೆ ಗರ್ಭವಾಸದಿಂದ ಬಿಡುಗಡೆಯಾಗಿ ಹೊರಬಂದಮೇಲಾದರೂ ಶಿವನನ್ನು ನೆನೆಯಬಹುದಲ್ಲವೆ? ಎಂದರೆ ಅದಕ್ಕೆ ಮುಂದಿನ ಶ್ಲೋಕದಲ್ಲಿ ಕೊಟ್ಟಿರುವ ಉತ್ತರವನ್ನು ನೋಡೋಣ.

**ಬಾಲ್ಯೇ ದುಃಖಾತಿರೇಕಾನ್ಮಲಲುಲಿತವಪುಃ ಸ್ತನ್ಯಪಾನೇ ಪಿಪಾಸುಃ**
**ನೋ ಶಕ್ತಶ್ಚೇಂದ್ರಿಯೇಭ್ಯೋ ಭವಮಲಜನಿತಾ**
**ಜಂತವೋ ಮಾಂ ತುದಂತಿ ।**
**ನಾನಾರೋಗಾತಿದುಃಖಾದ್ರುದನಪರವಶಃ ಶಂಕರಂ ನ ಸ್ಮರಾಮಿ**
**ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋ**
**ಶ್ರೀ ಮಹಾದೇವ ಶಂಭೋ ॥೨॥**

೨. "ಬಾಲ್ಯದಲ್ಲಿ ದುಃಖದ ಹೆಚ್ಚಳದಿಂದ ಬಳಲುತ್ತಿದ್ದೆನಾಗಿ ಶಿವನನ್ನು ನೆನೆಯಲಿಲ್ಲ. ಆಗ ಮೈಯೆಲ್ಲವೂ ಕೊಳಕಾಗಿರುತ್ತಿತ್ತು. ಹಸಿವಿನಿಂದ ತಾಯಿಯ ಮೊಲೆಹಾಲು ಕುಡಿಯುವ ಆತುರದಲ್ಲಿಯೂ ಇಂದ್ರಿಯಗಳ ಪಾಟವವಿಲ್ಲದ್ದರಿಂದಲೂ ಶಿವಧ್ಯಾನವು ಸಾಧ್ಯವಾಗಲಿಲ್ಲ. ಹಾಗೂ ಎಲೈ ಭವನೆ, ಮಲದಿಂದ ಹುಟ್ಟಿದ ಹೇನು, ಜಂತುಹುಳುಗಳು, ಕ್ರಿಮಿಕೀಟಗಳು ನನ್ನನ್ನು ಪೀಡಿಸುತ್ತಿದ್ದವು. ಇನ್ನು ಅನೇಕ ರೀತಿಯ ರೋಗಾದಿಗಳ ದುಃಖನಿಮಿತ್ತವಾಗಿ ಅಳುತ್ತಾ ಪರವಶನಾಗಿ ಶಂಕರನನ್ನು ನೆನೆಯಲಾಗಲಿಲ್ಲ. ಎಲೈ ಶಿವನೆ, ಮಹಾದೇವನೆ, ಶಂಭುವೆ, ನನ್ನ ಅಪರಾಧವನ್ನು ಕ್ಷಮಿಸುವವನಾಗು".

## ವಿವರಣೆ

ಗರ್ಭವಾಸದಿಂದ ಬಿಡುಗಡೆಯಾದಾಗಲೇ ವಿಷ್ಣುಮಾಯೆಯು ಆವರಿಸಿದ್ದರಿಂದ ಜೀವನಿಗೆ ಹಿಂದಿನ ಗರ್ಭವಾಸದ ದುಃಖವೂ ಆಗ ಇದ್ದ ವಿಚಾರಶಕ್ತಿಯೂ ವೈರಾಗ್ಯವೂ ನಷ್ಟವಾಗಿಬಿಟ್ಟಿರುತ್ತದೆ. ಆದ್ದರಿಂದ ಭಗವಂತನ ನೆನಪು ಬರುವದು ಕಷ್ಟಸಾಧ್ಯವೇ ಸರಿ. ಇನ್ನು ಬಾಲ್ಯಾವಸ್ಥೆಯ ಪರಿಸ್ಥಿತಿಯನ್ನು ವಿಚಾರ ಮಾಡೋಣ. ತಾಯಿಯ ಮಡಿಲಲ್ಲಿ ಹಾಗೂ ತೊಟ್ಟಿಲಲ್ಲಿರುವಾಗಲೆಲ್ಲ ಮಲ ಮೂತ್ರಗಳ ಅಂಟು ಶರೀರಕ್ಕೆ ಆಗುತ್ತಿರುವದು. ಕರುಣಾಳುವಾದ ತಾಯಿಯು

ಆಗಾಗ್ಗೆ ಶುದ್ಧಗೊಳಿಸಿ ಮಗುವನ್ನು ಕಾಪಾಡುವಳು. ಅನಂತರ ಹೊಟ್ಟೆಯ ಹಸಿವಿನ ನಿಮಿತ್ತ ಮೊಲೆಹಾಲು ಕುಡಿಯುವದರಲ್ಲಿ ಕಾಲವು ಕಳೆಯುವದು. ಶರೀರವು ಬಲಿತಿರುವದಿಲ್ಲವಾಗಿ ತಾನಾಗಿಯೇ ಏಳುವದಾಗಲಿ, ಮಲಗುವದಾಗಲಿ ಸಾಧ್ಯವಿಲ್ಲದೆ ಪರಾಧೀನತೆಯಿಂದ ಬಾಳನ್ನು ಸಾಗಿಸಬೇಕಾಗಿರುವದು. ತನಗೆ ಬೇಕಾದದ್ದನ್ನು ತಿಳಿಸಲು ವಾಗಿಂದ್ರಿಯವು ಇನ್ನೂ ಬಲಿತಿರುವದಿಲ್ಲವಾಗಿ ಅಳುವದೊಂದೇ ಎಲ್ಲಾ ಸಂದರ್ಭದಲ್ಲಿಯೂ ವ್ಯವಹಾರದ್ವಾರವಾಗಿರುವದು. ಕೆಲವು ವೇಳೆ ಅತ್ತಾಗ ಅದು ತಾಯಿಗೆ ಅರ್ಥವಾಗದೆ ಹಸಿವಾಗಿದ್ದರೆ ಮಲಗಿಸಿ ತೂಗುವಳು. ಹೊಟ್ಟೆಯ ನೋವಾಗಿದ್ದರೆ ತಿಳಿಯದೆ ಹಾಲು ಕುಡಿಸುವಳು. ಹೀಗೆಲ್ಲ ವಿಷಮಸಂದರ್ಭಗಳನ್ನು ಎದುರಿಸಬೇಕಾಗುವದು. ಇನ್ನು ದೇವರನ್ನು ನೆನೆಯುವದೆಲ್ಲಿ ಬಂತು? ಇಂದ್ರಿಯಗಳಾವುವೂ ವ್ಯಕ್ತವಾಗಿಲ್ಲದಾಗ ಶಕ್ತಿಯೂ ಇರುವದಿಲ್ಲ. ಇನ್ನು ಶಿಶುವಾಗಿರುವಾಗಲೇ ಕಾಯಿಲೆಗಳ ಕಾಟವೂ ಹೆಚ್ಚಾಗಿರುತ್ತದೆ. ಜ್ವರ, ಶೀತ, ಕೆಮ್ಮು-ಮುಂತಾದವುಗಳಲ್ಲದೆ ಸಿಡುಬು, ಕಜ್ಜಿ, ತುರಿ, ದಡಾರ, ಇತ್ಯಾದಿ ರೋಗಗಳೂ ಪೀಡಿಸುವವು. ಇವುಗಳಿಲ್ಲದಾಗಲೂ ಹವಾಗುಣದ ವ್ಯತ್ಯಾಸದಿಂದ ಬಿಸಿಲು, ಚಳಿ, ಮಳೆ-ಮುಂತಾದವುಗಳ ಬಾಧೆಯೂ ಇರುವದು. ಶಿಶುವಾಗಿ ಮಲಗಿದ್ದಲ್ಲೇ ಮಲಗಿರುವಾಗ ಇರುವೆ, ಸೊಳ್ಳೆ, ತಿಗಣೆ-ಮುಂತಾದವು ಕಡಿದರೆ ಪರಿಹರಿಸಿಕೊಳ್ಳುವದೂ ಆಗಲಾರದು. ಹೀಗೆ ಪರಾಧೀನತೆಯೂ ಅಜ್ಞಾನವೂ ಅಶಕ್ತತೆಯೂ ಅಳುವದೇ ಮುಂತಾದ ಪರಿಸ್ಥಿತಿಯೂ ಬಾಲ್ಯವನ್ನು ದುಃಖಮಯವಾಗಿ ಮಾಡಿರುವದು.

ಶೈಶವಾವಸ್ಥೆಯನ್ನು ದಾಟಿ ಕೈಕಾಲುಗಳು ಬಲಿತು ಓಡಾಡುವ ಶಕ್ತಿಯು ಬಂದು ಕುಮಾರಾವಸ್ಥೆಯನ್ನು ಪಡೆದಾಗ ಬಾಲ್ಯದ ದುಃಖಗಳಿಂದ ಬಿಡುಗಡೆಯಾಗಿರುವದರಿಂದ ಶಿವನನ್ನು ಸ್ಮರಿಸಬಹುದಲ್ಲದೆ? ಎಂದರೆ ಆಗಲೂ ಶಿವಧ್ಯಾನವು ದಕ್ಕದೆ ಇದೆ. ಹೇಗೆಂದರೆ ಪ್ರಪಂಚದ ಜ್ಞಾನವು ವಿಕಾಸವಾದಂತೆಲ್ಲ ಇಂದ್ರಿಯ ಮನೋಬುದ್ಧಿಗಳು ಬಲಿತಂತೆಲ್ಲ ಆಟವಾಡುವದರಲ್ಲಿ ಮನಸ್ಸು ಲೀನವಾಗಿಬಿಡುವದು. ಹುಡುಗನಾಗಿರುವಾಗ ತಂದೆತಾಯಿಗಳ ಹಾಗೂ ಗುರುಗಳ ಶಿಕ್ಷೆಗೆ ಒಳಪಟ್ಟಿರಬೇಕಾಗುವದು. ವಿದ್ಯಾಭ್ಯಾಸಕ್ಕಾಗಿ ನಿಯತವಾದ ಕಾಲವನ್ನು ಸವೆಯಿಸಬೇಕಾಗುವದು. ಜವಾಬ್ದಾರಿಯಿಲ್ಲದಿರುವದರಿಂದ ಯಾರೂ ಗೌರವವನ್ನು ಕೊಡುವದಿಲ್ಲ. ತನಗೆ ಬೇಕಾದ ಪದಾರ್ಥಗಳನ್ನು ಮತ್ತೊಬ್ಬರನ್ನು ಬೇಡಿ ಪಡೆದುಕೊಳ್ಳಬೇಕಾಗುವದು. ಆ ವಯಸ್ಸಿನಲ್ಲಿಯೂ ರೋಗಾದಿಗಳ ಕಾಟ ಇದ್ದೇಇರುವದು. ಹೇಗೋ ಕೌಮಾರಾವಸ್ಥೆಯನ್ನು ದಾಟಿದವನಾದರೆ ಯುವಕನಾಗುವನು. ಈ ಕಾಲದಲ್ಲಿಯೂ ವಿದ್ಯಾಭ್ಯಾಸದ ನಿರ್ಬಂಧವಿರುವದು. ತಾನು ಕಲಿಯಬೇಕೆಂದಿರುವ ವಿದ್ಯೆಯನ್ನು ಕಲಿಯಲು ಆಗದೆ ಇರಬಹುದು. ಈ ವಯಸ್ಸಿನಲ್ಲೇನಾದರೂ ಕೆಟ್ಟ ಸ್ನೇಹಿತರ ಸಹವಾಸವು ದೊರೆತದ್ದೇ ಆದರೆ

ಶ್ರೇಯೋಮಾರ್ಗದಿಂದಲೇ ಭ್ರಷ್ಟನಾಗಿಬಿಡುವನು. ಒಳ್ಳೆಯ ಸಹವಾಸವೇ ದೊರೆತರೂ ಈಗಿನ ವಿದ್ಯಾಭ್ಯಾಸಕ್ರಮದಲ್ಲಿ ದೇವರಿಗಾಗಲಿ ದೇವರ ಸ್ಮರಣೆಗಾಗಲಿ ಅವಕಾಶವೇ ಇಲ್ಲ. ಪಠ್ಯಪುಸ್ತಕಗಳಿಂದ ದೇವರನ್ನು ಹೊರದೂಡಿರುವಂಥ ಸನ್ನಿವೇಶದಲ್ಲಿ ಯಾರೂ ಆ ವಿಷಯವಾಗಿ ತಿಳಿವಳಿಕೆಯನ್ನು ಹೇಳದೆ ಇರುವಾಗ ಶಿವನನ್ನು ನೆನೆಯುವದಾದರೂ ಹೇಗಾದೀತು? ಈ ರೀತಿಯಾಗಿ ಶಿವಚಿಂತನೆಯೇ ಇಲ್ಲದೆ ಬಾಲ್ಯವನ್ನೆಲ್ಲ ಸವೆಯಿಸಿದ ತನ್ನನ್ನು ಕ್ಷಮಿಸುವಂತೆ ಪ್ರಾರ್ಥಿಸಲಾಗಿದೆ.

**ಪ್ರೌಢೋಽಹಂ ಯೌವನಸ್ಥೋ ವಿಷಯವಿಷಧರೈಃ**
**ಪಂಚಭಿರ್ಮರ್ಮಸಂಧೌ**
**ದಷ್ಟೋ ನಷ್ಟೋ ವಿವೇಕಃ ಸುತಧನಯುವತಿ-**
**ಸ್ವಾದುಸೌಖ್ಯೇ ನಿಷಣ್ಣಃ ।**
**ಶೈವೇ ಚಿಂತಾವಿಹೀನಂ ಮಮ ಹೃದಯಮಹೋ**
**ಮಾನಗರ್ವಾಧಿರೂಢಂ**
**ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ**
**ಶ್ರೀ ಮಹಾದೇವ ಶಂಭೋ ॥೩॥**

೩. "ನಾನು ಪ್ರೌಢನಾದಾಗ ಯೌವನದಲ್ಲಿದ್ದು ಕೊಂಡವನಾಗಿ ಐದು ವಿಷಯಗಳೆಂಬ ಹಾವುಗಳಿಂದ ಮರ್ಮಸ್ಥಳಗಳಲ್ಲಿ ಕಚ್ಚಲ್ಪಟ್ಟವನಾಗಿ ವಿವೇಕವನ್ನು ಕಳೆದುಕೊಂಡು ಮಗ, ಹಣ, ಹೆಂಗಸು- ಮುಂತಾದ ರುಚಿಕರವಾದ ಭೋಗದಲ್ಲಿ ಕುಳಿತುಬಿಟ್ಟೆನು. ಶಿವನ ಸಂಬಂಧವಾದ ಆಲೋಚನೆಯು ಮನಸ್ಸಿಗೆ ಬರಲಿಲ್ಲ. ಅಯ್ಯೋ, ನನ್ನ ಹೃದಯವು ದುರಹಂಕಾರ, ಜಂಭಗಳಿಂದ ತುಂಬಿಹೋಯಿತು. ಹೀಗಿರುವಲ್ಲಿ ಶಿವಸ್ಮರಣೆಯನ್ನು ಕೈಗೊಳ್ಳದೆ ಇರುವ ನನ್ನ ಅಪರಾಧವನ್ನು ಎಲೈ ಶಿವನೆ, ಮಹಾದೇವನೆ, ಶಂಭುವೆ, ಕ್ಷಮಿಸುವವನಾಗು".

## ವಿವರಣೆ

ಈಗ ಯೌವನದಲ್ಲೇಕೆ ಶಿವನನ್ನು ನೆನೆಯಲಾಗಲಿಲ್ಲ? ಎಂಬಿದನ್ನು ತಿಳಿಸಲಾಗುವದು. ಮಾನವಜೀವನದಲ್ಲಿ ಯೌವನವೇ ಸಾರವಾದದ್ದು. ಪ್ರಾಪಂಚಿಕವಾದ ಭೋಗಭಾಗ್ಯಗಳೆಲ್ಲವನ್ನೂ ಸಂಪಾದಿಸಿಕೊಳ್ಳುವದಕ್ಕೂ ಅನುಭವಿಸುವದಕ್ಕೂ ಇದೇ ಮುಖ್ಯ ಕಾಲವು. ಈ ವಯಸ್ಸಿನಲ್ಲಿ ಇಂದ್ರಿಯಗಳೆಲ್ಲ ಶಕ್ತವಾಗಿರುತ್ತವೆ. ಬುದ್ಧಿಯೂ ಚೆನ್ನಾಗಿ ವಿಕಾಸವಾಗಿರುತ್ತದೆ. ಜೀವನವನ್ನು ಉತ್ತಮರೀತಿಯಿಂದ ಸಾಗಿಸಬೇಕೆಂಬ ಹುರುಪು ಇರುತ್ತದೆ. ಏನನ್ನಾದರೂ ಸಂಕಲ್ಪಿಸಿದರೆ ನೆರವೇರಿಸಿಬಿಡುವೆನೆಂಬ ಛಲವೂ ಇರುತ್ತದೆ. ಹೀಗೆ ಎಲ್ಲಾ ವಿಧವಾದ ಅನುಕೂಲಗಳೂ ಶಕ್ತಿಸಾಮರ್ಥ್ಯಗಳೂ ತಿಳಿವಳಿಕೆಯೂ ಉತ್ಸಾಹವೂ ಇರುವಾಗ ಶಿವನ ಧ್ಯಾನವೇಕೆ ಸಾಧ್ಯವಾಗದೆ ಹೋಯಿತು? ಎಂಬಿದೇ ಸಮಸ್ಯೆಯಾಗಿದೆ. ಅದಕ್ಕೆ ಈಗ ಉತ್ತರವನ್ನು

ಹೇಳಲಾಗುವದು. ನಿಜ; ಯೌವನದಲ್ಲಿ ಸೌಕರ್ಯಗಳೆಲ್ಲವೂ ಇದ್ದು ಸ್ವಾತಂತ್ರ್ಯವೂ ಇದ್ದರೂ ಅದೇ ಯೌವನವೇ ಶಿವನ ಧ್ಯಾನಕ್ಕೆ ಅಡ್ಡಿಯನ್ನುಂಟುಮಾಡಿರುತ್ತದೆ. ಹೇಗೆಂದರೆ ಇಂದ್ರಿಯಗಳು ಪ್ರೌಢವಾಗಿರುವವೆಂಬುದು ನಿಜ. ಆದರೆ ಅವುಗಳು ತಮ್ಮ ಸ್ವಭಾವಕ್ಕೆ ತಕ್ಕಂತೆ ಹೊರಮುಖವಾಗಿಯೇ ವ್ಯಾಪಾರಮಾಡುವವು. ಸೃಷ್ಟಿಕರ್ತನು ಅವುಗಳನ್ನು ಹಾಗೆಯೇ ಜೋಡಿಸಿದ್ದಾನೆ. ಹೇಗೆ ರಾತ್ರೆವೇಳೆಗಳಲ್ಲಿ ಕಾರಿನಲ್ಲಿ ಪ್ರಯಾಣಮಾಡುವಾಗ ಮುಂಭಾಗದ ದೀಪಗಳು ರಸ್ತೆಯನ್ನೇ ಬೆಳಗುವವೋ ಆಗ ಕಾರಿನೊಳಗೆ ಕತ್ತಲೆಯೇ ಆವರಿಸಿರುವದೋ ಹಾಗೆಯೇ ಇಂದ್ರಿಯಗಳು ನಮ್ಮ ಹೃದಯಾಂತರ್ಗತನಾದ ಶಿವನನ್ನು ಬೆಳಗದೆ ವಿಷಯಗಳನ್ನೇ ಬೆಳಗುವವು. ಇದರಿಂದ ಮನಸ್ಸು ಕೂಡ ಇಂದ್ರಿಯಗಳನ್ನೇ ಅನುಸರಿಸಿ ಹೊರಮುಖವಾಗಿಬಿಡುವದು. ವಿಷಯೇಂದ್ರಿಯಗಳ ಸಂಬಂಧವು ಮನಸ್ಸಿಗೆ ತಾತ್ಕಾಲಿಕವಾದ ಸುಖವನ್ನುಂಟು ಮಾಡುವದು. ಹೀಗೆ ಐದು ಇಂದ್ರಿಯಗಳನ್ನೂ ಐದು ವಿಷಯಗಳಾದ ಶಬ್ದ ಸ್ಪರ್ಶರೂಪರಸಗಂಧಗಳು ವಿಷದ ಹಾವಿನಂತೆ ಕಚ್ಚುವವು. ಇಂದ್ರಿಯಗಳನ್ನು ಗ್ರಹಗಳೆಂದೂ ವಿಷಯಗಳನ್ನು ಅತಿಗ್ರಹಗಳೆಂದೂ ಉಪನಿಷತ್ತಿನಲ್ಲಿ ಕರೆದಿದೆ. ವಿಷಯಗಳ ಸ್ಪರ್ಶವಾದೊಡನೆ ಇಂದ್ರಿಯಗಳಲ್ಲಿ ವಿಕಾರವಾಗಿ ಆ ಮೂಲಕ ಮನಸ್ಸಿನಲ್ಲಿ ವ್ಯಾಮೋಹವುಂಟಾಗಿಬಿಡುವದು. ಈ ವ್ಯಾಮೋಹವೇ ಬುದ್ಧಿಯನ್ನು ಮಂಕುಗೊಳಿಸಿ ಯುಕ್ತಾಯುಕ್ತವಿವೇಚನೆಯನ್ನು ಕಳೆದುಬಿಡುವದು. ಇನ್ನು ಮುಂದೆ ಮಾನವನಿಗೆ ಶ್ರೇಯಸ್ಸಿನ ಆಸೆಯೇ ಇಲ್ಲವಾಗಿ ಪ್ರೇಯಸ್ಸೇ ಇಷ್ಟವಾಗುವದು. ಆಗ ಪ್ರಾಪಂಚಿಕವಾದ ಇಂದ್ರಿಯಸೌಖ್ಯಗಳಿಗೆ ವಶನಾಗಿ ಆಯಾ ಇಂದ್ರಿಯಗಳನ್ನು ತೃಪ್ತಿಗೊಳಿಸುವದರಲ್ಲಿಯೇ ಕಾಲವನ್ನು ಕಳೆಯುವನು. ಇದರ ಪರಿಣಾಮವಾಗಿ ಅಹಂಕಾರಮಮಕಾರಗಳು ಬೆಳೆದು ಹೆಂಡತಿ, ಮಕ್ಕಳು, ಧನಕನಕಾದಿವಸ್ತುಗಳ ಸಂಗ್ರಹದಲ್ಲಿಯೂ ಅವುಗಳನ್ನು ಭೋಗಿಸುವದರಲ್ಲಿಯೂ ನಿರತನಾಗಿಬಿಡುವನು. ಇನ್ನು ಶಿವನ ಚಿಂತನೆಯು ಹೇಗೆತಾನೆ ಉಂಟಾದೀತು?

ಇನ್ನು ಯೌವನದಲ್ಲಿ ಈ ರೀತಿಯಾದ ಸತಿಸುತಧನಕನಕಾದಿಗಳ ವ್ಯಾಮೋಹ, ಭೋಗಾಸಕ್ತಿಗಳ ಜೊತೆಗೆ ಅಹಂಕಾರ, ಅಭಿಮಾನಾದಿದುರ್ಗುಣಗಳೂ ಸೇರಿಕೊಳ್ಳುವವು. ಯಾರಾದರೂ ಹಿತವಚನವನ್ನು ಹೇಳಿದರೆ ಅದನ್ನು ಮನುಷ್ಯನು ತಿರಸ್ಕರಿಸುವನು. ತಾನೇ ಎಲ್ಲರಿಗಿಂತ ಜಾಣನೆಂದೂ ಶ್ರೀಮಂತನೆಂದೂ ಬಲಿಷ್ಠನೆಂದೂ ಭಾವಿಸಿ ದುರಹಂಕಾರದಿಂದ ವರ್ತಿಸುವನು. ಗುರುಹಿರಿಯರ ವಿಷಯದಲ್ಲಿಯೂ ಶಾಸ್ತ್ರೋಪದೇಶಗಳ ವಿಷಯದಲ್ಲಿಯೂ ತಟಸ್ಥನಾಗಿರುವನು. ಅಥವಾ ತಿರಸ್ಕಾರವನ್ನೇ ಪ್ರದರ್ಶಿಸುವನು. ಏಕೆಂದರೆ ಅಹಂಕಾರವು ಅವನ ವಿವೇಕಬುದ್ಧಿಯನ್ನು ಮರೆಮಾಡಿರುವದು. ನಿಜವಾಗಿ ಯೌವನದಲ್ಲಿ ಉಪವಾಸ, ತೀರ್ಥಯಾತ್ರೆ, ಗುರುಸೇವೆ, ವ್ರತನಿಯಮಗಳು, ದಾನಧರ್ಮಗಳು, ಸತ್ಸಂಗ, ಸದ್ಗ್ರಂಥಗಳ ಪಠನವೇ ಮುಂತಾದ ಕಾರ್ಯಗಳನ್ನು ನೆರವೇರಿಸಲು ಬಹಳವಾದ

ಅನುಕೂಲಗಳಿರುವವು. ಆದರೆ ಅಹಂಕಾರಾದಿಕಾರಣಗಳಿಂದ ಇಂಥ ಸತ್ಪ್ರವೃತ್ತಿಗಳಲ್ಲಿ ಮನಸ್ಸು ತೊಡಗುವದೇ ಇಲ್ಲ. ಶಿವನ ಸಂಬಂಧವಾದ ಯಾವದೇ ಒಳ್ಳೆಯ ಕೆಲಸಗಳನ್ನೂ ಮಾಡಲು ಮನಸ್ಸು ಬರುವದಿಲ್ಲ. ಜಗತ್ತೆಲ್ಲವೂ ಶಿವಸ್ವರೂಪವೇ ಆಗಿದ್ದರೂ ಒಂದಿಷ್ಟಾದರೂ ಶಿವನ ನೆನಪಾಗುವದಿಲ್ಲ. ಕಾಲವೂ ಅವಕಾಶಗಳೂ ಕಳೆದೇಹೋಗಿರುತ್ತವೆ. ತಾನು ಶಿವನನ್ನು ನೆನೆಯದೆ ಹೋದೆನಲ್ಲ-ಎಂಬ ಅರಿವು ಮೂಡುವ ವೇಳೆಗೆ ಯೌವನವೆಲ್ಲ ದಾಟಿಹೋಗಿರುತ್ತದೆ. ಮಾಡಬಾರದ ಕೆಲಸಗಳನ್ನು ಮಾಡಿ ಆಗಿಬಿಟ್ಟಿರುತ್ತದೆ. ವಯಸ್ಸಾದಂತೆಲ್ಲ ಇಂದ್ರಿಯಗಳ ಶಕ್ತಿಯು ಕುಗ್ಗಿ ಮನಸ್ಸು ಬೇಸರವನ್ನೂ ಹೊಂದುತ್ತದೆ. ಹೀಗೆ ಕಾಲ ಕಳೆದು, ಶಿವನನ್ನು ಯೌವನದಲ್ಲಿ ಧ್ಯಾನಮಾಡದೆ ಇರುವ ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಇಲ್ಲಿ ಪ್ರಾರ್ಥಿಸಲಾಗಿದೆ.

**ವಾರ್ಧಕ್ಯೇ ಚೇಂದ್ರಿಯಾಣಾಂ ವಿಕಲಗತಿಮತಃ ಚಾಧಿದೈವಾದಿತಾಪೈಃ**
**ಪ್ರಾಪ್ತೈ ರೋಗೈರ್ವಿಯೋಗೈಃ ವ್ಯಸನಕೃಶತನೋಃ ಜ್ಞಪ್ತಿಹೀನಂ**
**ಚ ದೀನಮ್ ।**
**ಮಿಥ್ಯಾಮೋಹಾಭಿಲಾಷೈಃ ಭ್ರಮತಿ ಮಮ ಮನೋ**
**ಧೂರ್ಜಟೇರ್ಧ್ಯಾನಶೂನ್ಯಂ**
**ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ**
**ಶ್ರೀ ಮಹಾದೇವ ಶಂಭೋ ॥೪॥**

೪. "ವಾರ್ಧಕ್ಯದಲ್ಲಿ ಇಂದ್ರಿಯಗಳೆಲ್ಲವೂ ಸವೆದುಹೋಗಿ ಅಶಕ್ತವಾಗಿರುವದರಿಂದಲೂ ಚಳಿ, ಬಿಸಿಲು, ಗಾಳಿ-ಇವುಗಳನ್ನು ತಡೆಯಲಾರದೆ ತಾಪವುಂಟಾಗುವದರಿಂದಲೂ ವಯಸ್ಸಾದಮೇಲೆ ಶರೀರವನ್ನು ಒಳಹೊಕ್ಕ ರೋಗಗಳು ಹಾಗೇ ನೆಲೆನಿಂತುಬಿಡುವದರಿಂದಲೂ ಬಂಧುಮಿತ್ರರಲ್ಲಿಯೂ ಕುಟುಂಬದಲ್ಲಿಯೂ ಉಂಟಾಗುವ ಇಷ್ಟಜನರ ವಿಯೋಗದಿಂದ ಸಂಭವಿಸುವ ದುಃಖಗಳಿಂದಲೂ ಶರೀರವು ಕ್ಷೀಣವಾಗಿ ಮನಸ್ಸು ಜ್ಞಾನಶೂನ್ಯವಾಗಿಬಿಡುವದು. ಆದರೂ ಮನಸ್ಸು ತಾನು ತನ್ನವರೆಂಬ ಸುಳ್ಳಾದ ಅಭಿಮಾನದಿಂದಲೂ ಆಸೆಯಿಂದಲೂ ಚಂಚಲವಾಗಿ ಅಡ್ಡಾಡುತ್ತಿರುವದು. ಹೀಗಾಗಿ ಧೂರ್ಜಟಿಯ ಧ್ಯಾನವಿಲ್ಲದ್ದಾಗಿಬಿಡುವದು. ಆದ್ದದರಿಂದ ಶಿವ, ಮಹಾದೇವ, ಶಂಭೋ, ನನ್ನ ಅಪರಾಧಗಳನ್ನು ಕ್ಷಮಿಸುವವನಾಗು"- ಎಂದರ್ಥ.

## ವಿವರಣೆ

ಮನುಷ್ಯಜೀವನದಲ್ಲಿ ವಾರ್ಧಕ್ಯವನ್ನು ಕಾಣುವದು ಒಂದು ಗೌರವವು. ಸರ್ಕಾರದವರು ಕೂಡ ತಮ್ಮ ನೌಕರರಿಗೆ ವಾರ್ಧಕ್ಯವುಂಟಾದಕೂಡಲೆ ಕೆಲಸದಿಂದ ವಿಶ್ರಾಂತಿಯನ್ನು ನೀಡಿ ವಿಶ್ರಾಂತಿವೇತನವನ್ನು ಕೊಡುತ್ತಾರೆ. ಸಮಾಜದಲ್ಲಿಯೂ

ವೃದ್ಧನಾದವನನ್ನು ಹಿರಿಯನೆಂದೂ ಅನುಭವಿಯೆಂದೂ ಗೌರವಿಸುತ್ತಾರೆ. ಪ್ರಾಯಶಃ ಮನುಷ್ಯನು ಆ ವೇಳೆಗೆ ತನ್ನ ಜವಾಬ್ದಾರಿಯನ್ನೆಲ್ಲ ಪೂರೈಸಿಕೊಂಡಿರುತ್ತಾನೆ. ಹೀಗಾಗಿ ವಯಸ್ಸಾದಂತೆಲ್ಲ ತಿಳಿವಳಿಕೆಯೂ ಪರಿಪಕ್ವವಾಗಿದ್ದು ಶಿವನ ಧ್ಯಾನಕ್ಕೆ ಸಾಕಷ್ಟು ಅನುಕೂಲವಾಗಿರುತ್ತದೆ. ಆದ್ದರಿಂದ ಉಳಿದ ಬಾಲ್ಯಯೌವನಾದಿಗಳಲ್ಲಿ ಸಾಧ್ಯವಾಗದ ಶಿವನ ಚಿಂತನೆಯನ್ನು ವಾರ್ಧಕ್ಯದಲ್ಲಿ ಏಕೆ ಮಾಡಬಾರದು? ಹಿರಿಯರು ಹೀಗೆ ಚಿಂತಿಸಲೆಂದು ಕಿರಿಯರೂ ಸಹಾಯಮಾಡುತ್ತಾರಲ್ಲವೆ? ಜವಾಬ್ದಾರಿಯನ್ನು ಕಿರಿಯರಿಗೇ ವಹಿಸಿ ವಿರಾಮವನ್ನು ಮಾಡಿಕೊಂಡು ಹಿರಿಯರಾದಾಗ ನಾವೇಕೆ ಶಿವಚಿಂತನೆಯಲ್ಲೇ ತೊಡಗಬಾರದು? ಎಂದು ಪ್ರಶ್ನೆ.

ಇದಕ್ಕೆ ಈ ಶ್ಲೋಕದಲ್ಲಿ ತಿಳಿಸುವದೇನೆಂದರೆ : ಈ ವಾರ್ಧಕ್ಯವೂ ಶಿವನ ಧ್ಯಾನಕ್ಕೆ ದಕ್ಕದೆಹೋಗಿರುತ್ತದೆ. ಹೇಗೆಂದರೆ ಮುಪ್ಪು ಬಂತೆಂದರೆ ಇಂದ್ರಿಯಗಳೆಲ್ಲವೂ ಶರೀರದೊಡನೆಯೇ ನಿಶ್ಶಕ್ತವಾಗಿಬಿಡುವವು. ಆಗ ಓದಲು, ಪಾರಾಯಣಮಾಡಲು ಕಣ್ಣು ಮಂಜಾಗಿರುವದು. ಕುಳಿತು ಧ್ಯಾನಮಾಡಲು ಅಥವಾ ತೀರ್ಥಸ್ನಾನ, ಉಪವಾಸಾದಿಗಳನ್ನು ನಡೆಯಿಸಲು ದೇಹವು ಸಮರ್ಥವಾಗಿರುವದಿಲ್ಲ. ದೇಹದಾರ್ಢ್ಯವಿಲ್ಲವಾದರೆ ಮನಸ್ಸು ಕೂಡ ದೃಢವಾಗಿರುವದಿಲ್ಲ. ಅದು ಚದುರಿಹೋಗುತ್ತಿರುವದು. ಇನ್ನು ಹೆಚ್ಚು ಚಳಿಯನ್ನಾಗಲಿ, ಮಳೆಬಿಸಿಲುಗಳನ್ನಾಗಲಿ ದೂರಪ್ರಯಾಣ, ಆಯಾಸಕರವಾದ ಕೆಲಸಗಳನ್ನಾಗಲಿ ದೇಹವು ಸಹಿಸಲಾರದಾಗಿರುವದು. ಈ ವೇಳೆಗಾಗಲೇ ಕೆಲವು ರೋಗಗಳು ದೇಹದಲ್ಲಿ ಬಂದು ನೆಲೆಸಿಬಿಟ್ಟಿರುವವು. ಅವುಗಳಿಗೆ ಚಿಕಿತ್ಸೆಯನ್ನು ಮಾಡಿದರೂ ಸ್ವಲ್ಪಕಾಲ ಉಪಶಾಂತವಾಗುವವೇ ಹೊರತು ಸಂಪೂರ್ಣವಾಗಿ ಬಿಟ್ಟು ತೊಲಗುವದಿಲ್ಲ. ಆಗಾಗ್ಗೆ ಉಲ್ಬಣವಾಗುತ್ತಲೇ ಇರುವವು. ಇವುಗಳನ್ನೆಲ್ಲ ಸಹಿಸಿಕೊಂಡಾದರೂ ಹಠದಿಂದ ಶಿವನ ಧ್ಯಾನವನ್ನು ಕೈಗೊಳ್ಳೋಣವೆಂದರೆ ಮನಸ್ಸು ಬೇಸರವನ್ನು ಹೊಂದುತ್ತಿರುವದು. ಅದು ಉತ್ಸಾಹದಿಂದ ಮುನ್ನುಗ್ಗುವುದಿಲ್ಲ. ಇನ್ನು ವಯಸ್ಸಾದಂತೆಲ್ಲ ಇಷ್ಟಬಂಧುಮಿತ್ರರ ವಿಯೋಗಗಳನ್ನು ಅನುಭವಿಸಬೇಕಾಗಿರುವದು. ದೀರ್ಘಜೀವಿಯಾದವನ ಎದುರಿನಲ್ಲಿ ಕುಟುಂಬದಲ್ಲೇ ಕೆಲವರು ಕಣ್ಮರೆಯಾಗುತ್ತಿರುವರು. ಇದರಿಂದ ಬಹಳ ದುಃಖವೂ ಅವರ ಒಡನಾಟದ ನೆನಪುಗಳ ಪೀಡೆಯಿಂದ ಚಿತ್ತವಿಕ್ಷೇಪವೂ ಆಗುತ್ತಿರುವದು. ಕೆಲವು ವೇಳೆ ಇಷ್ಟರಾದವರು ಸಾಯದೆಹೋದರೂ ದೂರದೇಶಗಳಿಗೆ ಹೋಗುವದು, ಅಥವಾ ಹತ್ತಿರವೇ ಇದ್ದರೂ ತಿರಸ್ಕಾರ, ದ್ವೇಷಗಳನ್ನು ಬೆಳೆಯಿಸಿಕೊಂಡು ಹಿರಿಯರನ್ನೇ ದೂರಮಾಡಿ ಬಿಡುವದು. ಗೌರವಿಸದೆ ಇರುವದು, ದೂಷಿಸುವದು-ಮುಂತಾದ ರೀತಿಗಳಿಂದ ಮುಪ್ಪಿನಕಾಲದಲ್ಲಿ ಮನಸ್ಸಿಗೆ ಬಹಳ ಸಂತಾಪವನ್ನು ಉಂಟುಮಾಡುವದು. ಇಂಥ ಕಾಲದಲ್ಲಿ ಶಿವನ ಸ್ಮರಣೆಯು ಹೇಗೆ ಬಂದೀತು ?

ಇನ್ನು ವಾರ್ಧಕ್ಯನಿಮಿತ್ತವಾಗಿ ಶರೀರವು ಬಡಕಲಾಗಿ ನಿಶ್ಯಕ್ತವಾಗಿಬಿಡುವದು. ಆಗ ಮನಸ್ಸು ಕೂಡ ಸೋತಿರುವದು. ಒಳ್ಳೆಯ ನೆನಪುಗಳು ಉಳಿಯುವದಿಲ್ಲ. ಯಾವದಾದರೂ ಸದ್ಗ್ರಂಥವನ್ನೋದಿದರೂ ಏನೂ ಜ್ಞಾಪಕವಿರುವದಿಲ್ಲ. ಕೇಳಿದ್ದೂ ಹಾಗೇ ಮಾಸಿಹೋಗಿರುವದು. ಇನ್ನು ಹೊಸದಾಗಿ ಏನನ್ನೂ ಕಲಿಯುವದೂ ಸಾಧ್ಯವಾಗುವದಿಲ್ಲ. ಕಾಲವು ಬದಲಾದಂತೆಲ್ಲ. ಪ್ರಪಂಚಕ್ಕೂ ತನಗೂ ದೂರವಾಗಿಬಿಡುವದು. ಹಳೆಯದಾದ ನಡೆವಳಿಕೆ, ಆಚಾರಗಳು, ಬುದ್ಧಿವಾದಗಳು ಚಲಾವಣೆಯಿಲ್ಲದ ನಾಣ್ಯಗಳಾಗಿಬಿಡುವವು. ಇದರಿಂದ ವೃದ್ಧರಿಗೆ ಕೋಪವೇ ಬರುವದು. ಆದರೆ ಅದಕ್ಕೆ ಬೆಲೆಯೇನೂ ಇರುವದಿಲ್ಲ. ಕೊನೆಗೆ ಸೋತು ಸೊರಗಿ ಬುದ್ಧಿಯ ಸ್ತಿಮಿತತೆಯನ್ನೇ ಕಳೆದುಕೊಳ್ಳಬೇಕಾಗಿರುವದು. ಇಷ್ಟಾದರೂ ನಾನು, ನನ್ನದೆಂಬ ಅಭಿಮಾನವು ಹೋಗಿರುವದಿಲ್ಲ. ಆಸೆಯಂತೂ ಎಲ್ಲಾ ವಿಷಯಗಳಲ್ಲಿಯೂ ಇನ್ನೂ ಹಸಿರಾಗಿಯೇ ಉಳಿದುಕೊಂಡಿರುವದು. ಹೀಗೆಲ್ಲ ವಿಚಾರಿಸುತ್ತಾ ಹೋದಂತೆ ಶಿವನ ಧ್ಯಾನಕ್ಕೆ ವಾರ್ಧಕ್ಯದಲ್ಲಿಯೂ ಅವಕಾಶವೇ ದೊರೆತಿರುವದಿಲ್ಲ. ಮನಸ್ಸು ಶಿವಧ್ಯಾನಶೂನ್ಯವಾಗಿರುವದು. ಹೀಗೆ ವಾರ್ಧಕ್ಯದಲ್ಲಿಯೂ ಶಿವಸ್ಮರಣೆಯನ್ನು ಮಾಡದೆ ಕಾಲವನ್ನು ನೂಕಿರುವ ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಶಿವನಲ್ಲಿ ಪ್ರಾರ್ಥಿಸಲಾಗಿದೆ.

**ಸ್ನಾತ್ವಾ ಪ್ರತ್ಯೂಷಕಾಲೇ ಸ್ನಪನವಿಧಿವಿಧೌ ನಾಹೃತಂ ಗಾಂಗತೋಯಂ**
**ಪೂಜಾರ್ಥಂ ವಾ ಕದಾಚಿದ್ ಬಹುತರಗಹನೇಽಖಂಡ**
**ಬಿಲ್ವೀದಳಂ ವಾ ।**
**ನಾನೀತಾ ಪದ್ಮಮಾಲಾ ಸರಸಿ ವಿಕಸಿತಾ ಗಂಧಪುಷ್ಪೈಸ್ತ್ವದರ್ಥಂ**
**ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ**
**ಶ್ರೀ ಮಹಾದೇವ ಶಂಭೋ ॥೫॥**

೫. "ಬೆಳಗಿನಝಾವದಲ್ಲಿ ಎದ್ದು ಸ್ನಾನವಿಧಿಯಂತೆ ತೀರ್ಥಸ್ನಾನವನ್ನು ಮಾಡಿ ಶಿವನಪೂಜೆಗಾಗಿ ಅಗ್ರೋದಕವನ್ನು ತರಲಿಲ್ಲ. ಹಾಗೆಯೇ ಪೂಜೆಗಾಗಿ ಬಹಳ ಕಷ್ಟಪಟ್ಟು ವನದಲ್ಲಿರುವ ಮರದಿಂದ ಅಖಂಡವಾದ ಬಿಲ್ವಪತ್ರೆಗಳನ್ನೂ ಯಾವಾಗಲೂ ತರಲಿಲ್ಲ. ನಿನಗಾಗಿ ಸರೋವರದಲ್ಲಿ ಅರಳಿದ ಕಮಲದ ಹೂವಿನ ಮಾಲೆಯನ್ನೂ ಸಿದ್ಧಗೊಳಿಸಲಿಲ್ಲ. ಸುಗಂಧವಾದ ಹೂಗಳಿಂದ ಹಾರವನ್ನೂ ಕಟ್ಟಲಿಲ್ಲ. ಎಲೈ ಶಿವನೆ,. ಮಹಾದೇವನೆ, ಶಂಭುವೆ-ನನ್ನ ಈ ಅಪರಾಧಗಳನ್ನು ಕ್ಷಮಿಸುವವನಾಗು"ಎಂದರ್ಥ.

## ವಿವರಣೆ

ಈ ಶ್ಲೋಕದಲ್ಲಿ ಶಿವಪೂಜೆಗಾಗಿ ಸಿದ್ಧಗೊಳಿಸಬೇಕಾದ ವಸ್ತುಗಳನ್ನು ಕೂಡ ನಾನು ಸಂಗ್ರಹಿಸಲಿಲ್ಲ-ಎಂದು ತಿಳಿಸಲಾಗುವದು. ಶಿವಾರಾಧನೆಮಾಡುವ ಸಾಧಕನು ಬೆಳಗ್ಗೆ ಹೊತ್ತಿಗೆ ಮುಂಚೆಯೇ ಏಳಬೇಕು. ದೇಹಬಾಧೆಗಳನ್ನು ತೀರಿಸಿಕೊಂಡು ಕೆರೆ,

ನದಿ-ಮುಂತಾದ ದೇವನಿರ್ಮಿತವಾದ ತೀರ್ಥದಲ್ಲಿ ಅವಗಾಹನಸ್ನಾನಮಾಡಬೇಕು. ಅವಗಾಹನವೆಂದರೆ ನೀರಿನಲ್ಲಿ ಪೂರ ಮುಳುಗಿ ಮೈಯನ್ನೆಲ್ಲ ತೋಯಿಸಿಕೊಳ್ಳುವದು. ಹೀಗೆ ಮಾಡುವ ಮುಂಚೆ ಸಂಕಲ್ಪಮಾಡಿ ಅಘಮರ್ಷಣಸೂಕ್ತವನ್ನಾಗಲಿ, ಗಂಗಾದಿತೀರ್ಥಸ್ತೋತ್ರಗಳನ್ನಾಗಲಿ ಪಠಿಸುತ್ತಾ ವಿಧಿವತ್ತಾಗಿ ಸ್ನಾನಮಾಡಬೇಕು. ಅನಂತರ ಆಹ್ನಿಕಗಳನ್ನು ಪೂರೈಸಿಕೊಂಡು ಶಿವಪೂಜಾರ್ಥವಾಗಿ ಮಡಿಯಲ್ಲಿ ನೀರನ್ನು ತರಬೇಕು. ಇದನ್ನು 'ಅಗ್ರೋದಕ' ವೆನ್ನುವರು. ಹಿಂದಿನ ದಿನವೇ ಕೂಡಿಟ್ಟ ನೀರು ಶ್ರೇಷ್ಠವಲ್ಲ. ಆದ್ದರಿಂದ ಪೂಜಾಕಾಲಕ್ಕೇ ಮಡಿನೀರನ್ನು ತಂದುಕೊಳ್ಳಬೇಕು. ಇಂಥ ಯಾವ ಕೆಲಸವನ್ನೂ ನಾನು ಕೈಗೊಳ್ಳಲಿಲ್ಲ-ಎಂದು ಶಿವನಲ್ಲಿ ಸಾಧಕನು ವಿಜ್ಞಾಪಿಸುತ್ತಿದ್ದಾನೆ. ಇನ್ನು ಆಹ್ನಿಕ, ಅಗ್ರೋದಕಗಳ ಅನಂತರ ಪೂಜಾರ್ಥವಾಗಿ ಹೂವು ಪತ್ರೆಗಳನ್ನು ತಾನೇ ತರಬೇಕು. ಇಂಥ ಹೂಪತ್ರೆಗಳು ತಾನೇ ಸ್ವಂತವಾಗಿ ಬೆಳೆದದ್ದಾದರೆ ಶ್ರೇಷ್ಠವು. ಅರಣ್ಯದಲ್ಲಿ ಹುಡುಕಿ ತಂದದ್ದು ಮಧ್ಯಮವು. ಹಣ ಕೊಟ್ಟು ಕೊಂಡದ್ದು ಕನಿಷ್ಠವು-ಎಂದು ಶಾಸ್ತ್ರಗಳು ತಿಳಿಸುವವು. ಈಗಿನ ಕಾಲಕ್ಕೆ ಮಾರ್ಕೆಟ್ ನಿಂದ ಕೊಂಡುತಂದ ಹೂಪತ್ರೆಗಳೇ ದೇವರಿಗೆ ಅರ್ಪಿತವಾಗುತ್ತಿವೆ. ಪಟ್ಟಣವಾಸದಲ್ಲಿ ಇದಕ್ಕಿಂತ ಹೆಚ್ಚಿನ ಅನುಕೂಲವಿರುವದಿಲ್ಲ. ಇರಲಿ. ಇನ್ನು ಕೆಲವು ಪತ್ರೆಗಳು ಕಾಡಿನಲ್ಲೇ ದೊರಕುವವು. ಅವುಗಳನ್ನು ಸಂಗ್ರಹಿಸಬೇಕು. ಶಿವಪೂಜೆಗೆ ಮುಖ್ಯವಾಗಿ ಬಿಲ್ವಪತ್ರೆಯು ಬೇಕಾಗುವದು. ಅದು. ಶಿವನಿಗೆ ಬಹಳ ಇಷ್ಟವಾದುದು. ಅದರ ದಳವನ್ನು ಅಖಂಡವಾಗಿರುವಂತೆ ಬಿಡಿಸಿ ತರಬೇಕು. ಅದಕ್ಕೆ ಮೂರೇ ಎಲೆಗಳಿರುವವು. ಆ ಮೂರು ತ್ರಿಗುಣಗಳನ್ನು ಸೂಚಿಸುವವು. ಅದರ ಅರ್ಪಣೆಯು ತ್ರಿಗುಣಗಳನ್ನೂ ಈಶ್ವರನಿಗೇ ಒಪ್ಪಿಸಿ ತಾನು ನಿಸ್ತ್ರೈಗುಣ್ಯನಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುವ ಅಭಿಪ್ರಾಯದ್ದಾಗಿರುವದು. ಬಿಲ್ವದಳವು ಹುಳುಗಳು ಕಚ್ಚಿ ತುಂಡಾಗಿರದಂತೆ ನೋಡಿಕೊಂಡು ತರಬೇಕು. ಅಂಥದ್ದು ಅಖಂಡವೆನಿಸುವದು. ಅದನ್ನು ನಾನು ಶಿವಪೂಜೆಗೆ ತರದೆ ಹೋದೆನು-ಎಂದು ಭಕ್ತನು ವಿಜ್ಞಾಪಿಸುತ್ತಿದ್ದಾನೆ. ತಾವರೆ ಹೂಗಳು ಸರೋವರಗಳಲ್ಲಿರುತ್ತವೆ. ಅವು ಚೆನ್ನಾಗಿ ಅರಳಿದಾಗ ಪೂಜೆಗೆ ಯೋಗ್ಯವಾಗುವವು. ಹಾಗೆ ಅರಳಿದ ಹೂಗಳನ್ನೇ ಹುಡುಕಿ ಕೊಯ್ದು ತಂದು ಮಾಲೆಯನ್ನು ಮಾಡಿ ಶಿವನಿಗೆ ಅರ್ಪಿಸಿದರೆ ಬಹು ಸಂತೋಷವಾಗುವದು. ಇಲ್ಲವಾದರೆ ಸುಗಂಧವಾದ ಯಾವದಾದರೂ ಹೂಗಳನ್ನು ತಂದು ಪೂಜಿಸಿದರೂ ಶಿವನಿಗೆ ಇಷ್ಟವಾಗುವುದು. ಇಂಥ ಯಾವ ಸೇವೆಯನ್ನೂ ನಾನು ಕೈಗೊಳ್ಳಲಿಲ್ಲವಾದ್ದರಿಂದ ನನ್ನ ಅಪರಾಧವನ್ನು ಕ್ಷಮಿಸು-ಎಂದು ಕೇಳುತ್ತಿದ್ದಾನೆ.

ಶಿವನು ನಿಜವಾಗಿ ಭಕ್ತಿಪ್ರಿಯನು. ಭಕ್ತಿಯಿಂದ ಯಾರು ಏನನ್ನು ಅರ್ಪಿಸಿದರೂ ಶಿವನು ಸ್ವೀಕರಿಸುತ್ತಾನೆ. ಒಮ್ಮೊಮ್ಮೆ ಆತನು ಭಕ್ತನನ್ನು ಪರೀಕ್ಷಿಸುವದೂ ಉಂಟು. ಒಮ್ಮೆ ನಾರಾಯಣನು ಶಿವನನ್ನು ಸಹಸ್ರನಾಮಗಳಿಂದ ಸಹಸ್ರಕಮಲಗಳನ್ನೇ ಬಳಸಿ ಪೂಜೆ ಮಾಡಲಾರಂಭಿಸಿದನಂತೆ ಇವನನ್ನು ಶಿವಭಕ್ತರಲ್ಲಿ ಅಗ್ರಗಣ್ಯನೆಂದೂ

ಪ್ರಪ್ರಥಮನೆಂದೂ ಶಿವಪುರಾಣಗಳಲ್ಲಿ ತಿಳಿಸಿದೆ. ಹೀಗೆ ಪೂಜೆ ಮಾಡುತ್ತಿರುವಾಗ ಆತನ ಭಕ್ತಿಯನ್ನು ಪರೀಕ್ಷಿಸುವದಕ್ಕಾಗಿ ಶಿವನು ಒಂದು ಪದ್ಮಪುಷ್ಪವನ್ನು ಮರೆಮಾಡಿಬಿಟ್ಟನು. ಸಹಸ್ರನಾಮಪೂಜೆಯ ಸಮಾಪ್ತಿ ಕಾಲಕ್ಕೆ ಒಂದು ಹೂವು ಸಾಲದೆಹೋಗಿಬಿಟ್ಟಿತು. ಆಗ ನಾರಾಯಣನು ತಾನು ಎದ್ದು ಹೋದರೆ ಆಸನಭಂಗವಾಗಿ ಪೂಜೆಯು ಕೆಡುವದು, ಏಳದೆ ಇದ್ದರೆ ಸಹಸ್ರಕಮಲಪೂಜೆಯಾಗದೆ ಕೊರತೆಯುಂಟಾಗುವದು. ನಾನೇ ಪ್ರಮಾದದಿಂದ ಒಂದು ನಾಮಕ್ಕೆ ಎರಡು ಪುಷ್ಪಗಳನ್ನು ಸಮರ್ಪಿಸಿದೆನೊ, ಅಥವಾ ಪುಷ್ಪಗಣನೆಯು ಕಾಲಕ್ಕೇ ಪ್ರಮಾದವಾಯಿತೊ-ಎಂದುಕೊಂಡು ತನ್ನನ್ನು ಜನರು ಕಮಲನೇತ್ರನೆಂದು ಕರೆಯುವದರಿಂದ ಒಂದು ಕಣ್ಣನ್ನೇ ಕಮಲದಬದಲು ಶಿವನಿಗೆ ಅರ್ಪಿಸುವೆನೆಂದು ಹೊರಟನು. ಆಗ ಶಿವನು ಪ್ರತ್ಯಕ್ಷನಾಗಿ ನಾರಾಯಣನನ್ನು ಅನುಗ್ರಹಿಸಿದನೆಂದು. ಪುರಾಣದಲ್ಲಿದೆ. ಹೀಗೆ ದೊಡ್ಡವರೆಲ್ಲ ಶಿವಭಕ್ತರಾಗಿ ಮೇಲುಪಂಕ್ತಿಯಾಗಿದ್ದರೂ ತಾನು ಶಿವಾರ್ಚನೆಯನ್ನು ಮಾಡಲಿಲ್ಲವಲ್ಲ-ಎಂದು ಕ್ಷಮೆ ಬೇಡಿರುತ್ತಾನೆ.

**ದುಗ್ಧೈಃ ಮಧ್ವಾಜ್ಯಯುಕ್ತೈರ್ದಧಿಗುಡಸಹಿತೈಃ ಸ್ನಾಪಿತಂ ನೈವ ಲಿಂಗಂ**
**ನೋ ಲಿಪ್ತಂ ಚಂದನಾದ್ಯೈಃ ಕನಕವಿರಚಿತೈಃ ಪೂಜಿತಂ ನ ಪ್ರಸೂನೈಃ।**
**ಧೂಪೈಃ ಕರ್ಪೂರದೀಪೈರ್ವಿವಿಧರಸಯುತೈರ್ನೈವ ಭಕ್ಷ್ಯೋಪಹಾರೈಃ**
**ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ**
**ಶ್ರೀ ಮಹಾದೇವ ಶಂಭೋ ॥೬॥**

೬. 'ಜೇನು, ತುಪ್ಪ, ಮೊಸರು, ಬೆಲ್ಲಗಳಿಂದ ಕೂಡಿದ ಹಾಲು-ಪಂಚಾಮೃತಗಳಿಂದ ನಾನು ಲಿಂಗವನ್ನು ಸ್ನಾನಮಾಡಿಸಲಿಲ್ಲ. ಚಂದನಾದಿ (ಗಂಧಗಳಿಂದ) ಲಿಂಗಕ್ಕೆ ಲೇಪನಮಾಡಲಿಲ್ಲ. ಚಿನ್ನದಿಂದ ಸಿದ್ಧಗೊಳಿಸಿದ ಹೂಗಳಿಂದ ಪೂಜಿಸಲೂ ಇಲ್ಲ. ಹಾಗೆಯೇ ಧೂಪ, ಕರ್ಪೂರದೀಪ, ನಾನಾರಸೋಪೇತವಾದ ಭಕ್ಷ್ಯ, ಉಪಹಾರಗಳಿಂದ ಸೇವಿಸಲಿಲ್ಲ. ಎಲೈ ಮಹಾದೇವನೆ, ಶಂಭುವೆ, ಶಿವನೆ, ಈ ನನ್ನ ಅಪರಾಧವನ್ನು ಕ್ಷಮಿಸು'

## ವಿವರಣೆ

ಈ ಶ್ಲೋಕದಲ್ಲಿ ತಾನು ಶಿವಪೂಜೆಯನ್ನು ಯೋಗ್ಯವಾದ ಸಾಮಗ್ರಿಗಳೊಡಗೂಡಿ ಶಾಸ್ತ್ರೀಯವಾದ ರೀತಿಯಿಂದ ಮಾಡಲಿಲ್ಲ- ಎಂದು ಸಾಧಕನು ತಿಳಿಸುತ್ತಿದ್ದಾನೆ. ಶಿವಪೂಜೆಯನ್ನು ಮಾಡಬೇಕಾದರೆ ಲಿಂಗದಲ್ಲಿ ಮಾಡಬೇಕು. ಹೇಗೆ ವೈಷ್ಣವಸಂಪ್ರದಾಯದಲ್ಲಿ ವಿಷ್ಣುವನ್ನು ಶಾಲಗ್ರಾಮದಲ್ಲಿ ಪೂಜಿಸುವರೋ ಹಾಗೆ ಶೈವಸಂಪ್ರದಾಯದಲ್ಲಿ ಲಿಂಗವೇ ಶಿವಪೂಜೆಗೆ ಪ್ರತೀಕವು. ನರ್ಮದಾನದಿಯಲ್ಲಿ ದೊರಕುವ ಕಲ್ಲುಗಳೆಲ್ಲವೂ (ಬಾಣ) ಲಿಂಗಗಳೆಂದೂ ಗಂಡಕೀನದಿಯಲ್ಲಿ ದೊರಕುವ ಶಿಲೆಗಳೆಲ್ಲವೂ ಸಾಲಿಗ್ರಾಮಗಳೆಂದೂ ಪ್ರತೀತಿಯಿದೆ. ಮತ್ತು ಶಿವಲಿಂಗವನ್ನೇ ಕಲ್ಲಿನಲ್ಲಿ

ಪಾಣಿಪೀಠಸಮೇತವಾಗಿ ಶಿಲ್ಪಿಗಳು ಕಡೆದು ಸಿದ್ಧಗೊಳಿಸಿಯೂ ಕೊಡುತ್ತಾರೆ. ಹೀಗೆ ಪ್ರತಿಷ್ಠಾಪಿತವಾದ ಶಿವಲಿಂಗವನ್ನಾಗಲಿ, ಮನೆಯಲ್ಲೇ ಪೂಜೆಗಾಗಿ ಇಟ್ಟುಕೊಂಡಿರುವ ಸ್ಫಟಿಕ, ರಜತ, ಸುವರ್ಣ. ಲಿಂಗಗಳಲ್ಲಾಗಲಿ ಶಿವನನ್ನು ಅರ್ಚನೆಮಾಡಬೇಕು. ಸರ್ವಗತನಾದ ಶಿವನನ್ನು ಪೂಜಾರ್ಥವಾಗಿ ಲಿಂಗದಲ್ಲಿ ಸನ್ನಿಹಿತನಾಗುವಂತೆ ಬೇಡಿಕೊಳ್ಳಬೇಕು. ಲಿಂಗವೆಂದರೆ ಗುರುತು ಎಂದರ್ಥ. ಸರ್ವಪದಾರ್ಥಗಳೂ ತಾನೇ ಆಗಿರುವ ಶಿವನನ್ನು ಲಿಂಗದಲ್ಲಿ ಗುರುತಿಸಿ ಪೂಜಿಸುವದೇ ಶಾಸ್ತ್ರೋಕ್ತವಾದ ಕ್ರಮವು. ಈ ರೀತಿಯಲ್ಲಿ ಲಿಂಗವನ್ನು ನಾನು ಕ್ರಮವರಿತು ಪೂಜೆಮಾಡದೆ ಹೋದೆನು-ಎಂದು ಸಾಧಕನು ತಿಳಿಸುತ್ತಿದ್ದಾನೆ. ಲಿಂಗಪೂಜೆಯನ್ನು ಮಾಡುವ ಕ್ರಮವು ಹೇಗೆಂದರೆ ಮೊದಲು ಶಿವನಿಗೆ ಪಂಚಾಮೃತಸ್ನಾನವನ್ನು ಮಾಡಿಸಬೇಕು. ಶಿವನು ಅಭಿಷೇಕಪ್ರಿಯನಾದ್ದರಿಂದ ಪ್ರತಿದಿನವೂ ಅವನಿಗೆ ಅಭಿಷೇಕವಾಗಬೇಕು. ಅದಕ್ಕೆ ಹಾಲು, ಮೊಸರು, ತುಪ್ಪ, ಜೇನು, ಸಿಹಿ (ಸಕ್ಕರೆ ಅಥವಾ ಬೆಲ್ಲ) ಇವುಗಳನ್ನು ಬಳಸಿ ಲಿಂಗಕ್ಕೆ ಸ್ನಾನಮಾಡಿಸಬೇಕು. ಈ ಒಂದೊಂದು ದ್ರವ್ಯವನ್ನು ಶಿವನಿಗೆ ಸಮರ್ಪಿಸುವದರಿಂದ ಒಂದೊಂದು ಫಲವಾಗಲಿದೆ. ಹೇಗೆಂದರೆ; ಹಾಲನ್ನು ಅರ್ಪಿಸುವದರಿಂದ ಪಾಪ ಪರಿಹಾರವಾಗುವದು. ಮೊಸರನ್ನು ಸಮರ್ಪಿಸುವದರಿಂದ ಧನಾಭಿವೃದ್ಧಿಯಾಗುವದು. ತುಪ್ಪವನ್ನು ಅರ್ಪಿಸುವದರಿಂದ ಆಯುಷ್ಯಾಭಿವೃದ್ಧಿಯಾಗುವದು. ಜೇನನ್ನು ಅರ್ಪಿಸುವದರಿಂದ ಮಾನಸಿಕವಾದ ರಾಗದ್ವೇಷಾದಿಕಿಲ್ಬಿಷಗಳು ಪರಿಹಾರವಾಗುವವು. ಸಿಹಿಯನ್ನು ಸಮರ್ಪಿಸುವದರಿಂದ ಸುಖವುಂಟಾಗುವದು. ಹೀಗೆ ಫಲಪ್ರದವಾದ ಪಂಚಾಮೃತಸ್ನಾನವನ್ನಾದರೂ ನಾನು ಶಿವನಿಗೆ ಮಾಡಿಸಲಿಲ್ಲ, ಮತ್ತು ಶಿವನನ್ನು ಫಲೋದಕ, ಗಂಧೋದಕ, ಭಸ್ಮೋದಕ, ರುದ್ರಾಕ್ಷೋದಕ, ಬಿಲ್ವೋದಕಾದಿಗಳಿಂದಲೂ ಸ್ನಾನಮಾಡಿಸಬೇಕೆಂದು ಪೂಜಾವಿಧಿಯಲ್ಲಿದೆ. ಇಂಥ ಅಭಿಷೇಕಗಳನ್ನು ನಾನು ನೆರವೇರಿಸದೆ ಹೋದೆನು. ಅನಂತರ ಚಂದನ, ಅಗರು, ಶ್ರೀಗಂಧಾದಿಗಳಿಂದ ಲಿಂಗವನ್ನು ತಂಪುಗೊಳಿಸಲಿಲ್ಲ. ಇದು ಕೂಡ ಪೂಜಾಕಾಲಕ್ಕೆ ಮುಖ್ಯವಾದದ್ದು. ಪರಿಮಳದ್ರವ್ಯಗಳಿಂದ ಲಿಂಗವನ್ನು ಚೆನ್ನಾಗಿ ಪೂಜಿಸಬೇಕು. ಅನಂತರ ಚಿನ್ನದ ಹೂವುಗಳಿಂದ ಅಲಂಕರಿಸಬೇಕು. ಅರ್ಥಾತ್ ಒಡವೆಗಳನ್ನು ಸಮರ್ಪಿಸಬೇಕು. ಉಳಿದ ಹೂವುಪತ್ರೆಗಳಿಂದಲೂ ಪೂಜಿಸಬೇಕು. ಈಶ್ವರನಿಗೆ ಎಕ್ಕದ ಹೂ, ಸಂಪಿಗೆ, ಪುನ್ನಾಗ, ನಂಜಬಟ್ಲು, ಪಾಟಲೀ, ಬೃಹತೀ, ಕಣಿಗಿಲೆ, ತುಂಬೆ-ಈ ಹೂವುಗಳು ಪ್ರಿಯವಾದವುಗಳು. ಇವುಗಳಿಂದ ಅರ್ಚಿಸಿದ ಅನಂತರ ಗುಗ್ಗುಲಧೂಪ, ನೀರಾಜನ, ನಿವೇದನ, ತಾಂಬೂಲಗಳಿಂದ ಉಪಚರಿಸಬೇಕು. ನಿವೇದನಕ್ಕೆ ಷಡ್ರಸೋಪೇತವಾದ ಪಕ್ವಾನ್ನಗಳು, ಭಕ್ಷ್ಯ ಭೋಜ್ಯಗಳನ್ನು ಸಿದ್ಧಗೊಳಿಸಿ ಸಮರ್ಪಿಸಬೇಕು. ನಾನಾವಿಧಫಲಗಳು,

ಪಾಯಸಾದಿಗಳು, ಸಿಹಿಯಾದ ಪಾನೀಯಗಳನ್ನೂ ಅರ್ಪಿಸಬಹುದು. ಒಟ್ಟಿನಲ್ಲಿ ಶಕ್ತಿಯಿದ್ದಷ್ಟು ಎಲ್ಲಾ ವಿಧವಾದ ಚತುರ್ವಿಧವಾದ (ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯ) ನೈವೇದ್ಯಗಳನ್ನೂ ಅರ್ಪಿಸಬೇಕು. ಇಂಥ ಅಡುಗೆಗಳನ್ನು ನಾವು ಬಾಯಿರುಚಿಗಾಗಿ ಮಾಡಿಕೊಂಡು ಊಟಮಾಡುತ್ತೇವಾದರೂ ಈಶ್ವರನಿಗೆ ಅರ್ಪಿಸುವ ಮಟ್ಟಿಗೆ ಹಿಂದೆಬೀಳುತ್ತೇವೆ. ಇದರಿಂದ ಆಯಾ ಆಹಾರಗಳನ್ನೇ ಬಾಣವಾಗಿ ಮಾಡಿಕೊಂಡು ರುದ್ರನು ಪಾಪಿಗಳನ್ನು ಹಿಂಸಿಸುತ್ತಾನೆ-ಎಂದು ರುದ್ರಾಧ್ಯಾಯದಲ್ಲಿ ತಿಳಿಸಿದೆ. ಆದ್ದರಿಂದ ನಿವೇದನವು ಮುಖ್ಯವಾದದ್ದಾಗಿದೆ. ಹೀಗೆ ರುದ್ರನನ್ನು ಸಾಧಕನು ಎಲ್ಲಾ ಷೋಡಶೋಪಚಾರಗಳಿಂದ ಪೂಜಿಸಬೇಕಾಗಿತ್ತಾದರೂ ಹಾಗೆ ಮಾಡಲಿಲ್ಲ. ಇದಕ್ಕೆ ಆಲಸ್ಯವೂ ಔದಾಸೀನ್ಯವೂ ಕಾರಣವೆಂದು ಹೇಳಬಹುದು. ರುದ್ರನು ಸರ್ವದೇವಾತ್ಮಕನಾಗಿರುವದರಿಂದ ಅವನನ್ನು ಪೂಜಿಸಿದರೆ ಎಲ್ಲಾ ದೇವತೆಗಳನ್ನೂ ಪೂಜಿಸಿದಂತೆಯೇ ಆಗಲಿದೆ. ಅನೇಕ ಉಪಚಾರಗಳನ್ನು ದೇವರಿಗೆ ಮಾಡುವದು ಅಸಾಧ್ಯವೆನಿಸಬಹುದು. ಆದರೆ ನಾವು ಉಪಯೋಗಿಸುವಂಥ ವಸ್ತುಗಳನ್ನಾದರೂ ಭಗವದರ್ಪಣೆಮಾಡಿ ಬಳಸುವದನ್ನು ಕಲಿಯಬೇಕು. ಹೀಗೆ ಪೂಜಿಸಲಿಲ್ಲವೆಂದೂ ಕ್ಷಮೆ ಬೇಡಲಾಗಿದೆ.

**ನೋ ಶಕ್ಯಂ ಸ್ಮಾರ್ತಕರ್ಮ ಪ್ರತಿಪದಗಹನೇ ಪ್ರತ್ಯವಾಯಾಕುಲಾಢ್ಯೇ**
**ಶ್ರೌತೇ ವಾರ್ತಾ ಕಥಂ ಮೇ ದ್ವಿಜಕುಲವಿಹಿತೇ ಬ್ರಹ್ಮಮಾರ್ಗಾನುಸಾರೇ।**
**ತತ್ತ್ವೇ ಜ್ಞಾತೇ ವಿಚಾರೇ ಶ್ರವಣಮನನಯೋಃ ಕಿಂ ನಿದಿಧ್ಯಾಸಿತವ್ಯಂ**
**ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ**
**ಶ್ರೀ ಮಹಾದೇವ ಶಂಭೋ ॥೭॥**

೭. 'ಪ್ರತಿ ಹೆಜ್ಜೆಗೂ ಗಹನವಾದ ಹಾಗೂ ಮಾಡದೆ ಇದ್ದರೆ ದೋಷವು ಗಂಟುಬೀಳುವ ಸ್ಮಾರ್ತಕರ್ಮವನ್ನೇ ನನ್ನಿಂದ ಆಚರಿಸಲಾಗುತ್ತಿಲ್ಲ. ಹೀಗಿರುವಲ್ಲಿ ವೇದಮಾರ್ಗಾನುಸಾರಿಯೂ ದ್ವಿಜರಿಗೆ ವಿಹಿತವೂ ಆದ ಶ್ರೌತಕರ್ಮವನ್ನು ಮಾಡಲಾಗುತ್ತಿಲ್ಲವೆಂದು ಹೇಳುವದೇನಿದೆ? ಇನ್ನು ಬ್ರಹ್ಮತತ್ತ್ವವೇ ತಿಳಿಯದೆ ವಿಚಾರವಾಗಲಿ ಶ್ರವಣಮನನಗಳಾಗಲಿ ಇಲ್ಲವಾಗಿರುವಲ್ಲಿ ನಿದಿಧ್ಯಾಸನ ಮಾಡಲು ಏನಿದ್ದೀತು? ಎಲೈ ಶಿವನೆ, ಮಹಾದೇವನೆ, ಶಂಭುವೆ, ನನ್ನ ಅಪರಾಧವನ್ನು ಕ್ಷಮಿಸುವವನಾಗು' ಎಂದರ್ಥ.

## ವಿವರಣೆ

ಈ ಶ್ಲೋಕದಲ್ಲಿ ಈಶ್ವರನ ಆಜ್ಞಾರೂಪವಾದ ವೇದಗಳಲ್ಲಿ ಹೇಳಿರುವ ಹಾಗೂ ಸ್ಮೃತಿಗಳಲ್ಲಿ ತಿಳಿಸಿರುವ ಶ್ರೌತಸ್ಮಾರ್ತಕರ್ಮಗಳನ್ನು ಮಾಡಲಾಗಲಿಲ್ಲವೆಂದು

ತಿಳಿಸಲಾಗಿದೆ. ವೇದದಲ್ಲಿ ಕರ್ಮಕಾಂಡವೆಂದೇ ಪ್ರಸಿದ್ಧವಾದ ಭಾಗವಿದೆ. ಅದರಲ್ಲಿ ನಿತ್ಯ, ಕಾಮ್ಯ, ಶಾಂತಿಕ, ಪೌಷ್ಟಿಕ-ಮುಂತಾಗಿ ಎಲ್ಲಾ ಕರ್ಮಗಳನ್ನೂ ವಿವರಿಸಲಾಗಿದೆ. ಆದರೆ ಅವುಗಳನ್ನು ಅನುಷ್ಠಾನಮಾಡುವದು ನಿಜವಾಗಿಯೂ ಕಷ್ಟವೇ ಸರಿ. ಏಕೆಂದರೆ ಮೊದಲನೆಯದಾಗಿ ಮಂತ್ರಗಳು ಸ್ವಾಧೀನದಲ್ಲಿರಬೇಕು. ಅನಂತರ ವಿಧಿಯೂ ತಿಳಿದಿದ್ದು ಯಾವ ಕಾಲಕ್ಕೆ ಹೇಗೆ ಮಾಡಬೇಕೆಂಬ ವಿಜ್ಞಾನವಿರಬೇಕು. ಮತ್ತು ಆಯಾ ಕರ್ಮಗಳಿಗೆ ಬೇಕಾದ ದ್ರವ್ಯಗಳೂ ಧನ-ಜನಸಹಾಯಗಳೂ ಇರಬೇಕು. ತಾನು ಕರ್ಮವನ್ನು ಮಾಡಲು ಅಧಿಕಾರವುಳ್ಳವನಾಗಿರಬೇಕು. ಇಷ್ಟೆಲ್ಲ ಇದ್ದರೂ ಆ ಕರ್ಮಗಳು ಹೆಜ್ಜೆಹೆಜ್ಜೆಗೂ ತೊಡಕಾಗಿರುವವು. ಪೂರ್ವಾಪರಗಳನ್ನು ನಿರ್ಧರಿಸುವದು ಕಷ್ಟವಾಗಿರುವದು. ಇವುಗಳನ್ನೆಲ್ಲ ಅರಗಿಸಿಕೊಂಡು ಸ್ಮಾರ್ತಕರ್ಮಗಳನ್ನು ಮಾಡುವದೇ ದುಸ್ತರವಾಗಿದೆ. ಹೀಗಿರುವಲ್ಲಿ ಸ್ಮಾರ್ತಕರ್ಮಗಳಿಗಿಂತಲೂ ಗಹನವಾದ ಶ್ರೌತಕರ್ಮಗಳನ್ನು ಮಾಡುವದೆಲ್ಲಿ ಬಂತು? ಶ್ರೌತಕರ್ಮಗಳು ಇನ್ನೂ ಹೆಚ್ಚಿನ ಕಟ್ಟುಪಾಡುಗಳಿಗೆ ಒಳಪಟ್ಟಿರುವವು. ಬಹು ದ್ರವ್ಯಸಾಧ್ಯವಾಗಿರುವವು. ಅವುಗಳಿಗೆ ಸಂಬಂಧಪಟ್ಟಂತೆ ಕೆಲವು ಅಂಗೋಪಾಂಗಕರ್ಮಗಳೂ ಇದ್ದುಕೊಂಡಿದ್ದು ಅವುಗಳನ್ನು ಅನುಷ್ಠಿಸದೆ ಪ್ರಧಾನಕರ್ಮವು ಪೂರ್ತಿಯಾಗುವದಿಲ್ಲ. ಆದರೂ ಅವುಗಳ ಅನುಷ್ಠಾನಕ್ಕೆ ಸೌಕರ್ಯಗಳೂ ಶಕ್ತಿಯೂ ಇಲ್ಲವಾದ್ದರಿಂದ ಮಾಡಲಾಗಲಿಲ್ಲ -ಎಂದು ಸಾಧಕನು ತಿಳಿಸಿದ್ದಾನೆ. ಶಾಸ್ತ್ರೀಯಕರ್ಮಗಳನ್ನು ಚೆನ್ನಾಗಿ ಮಾಡಿ ಈಶ್ವರನಿಗೆ ಅರ್ಪಿಸಿ ಚಿತ್ತಶುದ್ಧಿಯನ್ನು ಸಂಪಾದಿಸಿಕೊಳ್ಳಬೇಕಾಗಿರುತ್ತದೆ.

ಈಗ ಚಿತ್ತಶುದ್ಧಿಯೇ ದೊರಕದೆ ಇರುವದರಿಂದ ಮುಂದಿನ ಹಾದಿಯೂ ಕಷ್ಟವಾಗಿದೆ -ಎಂದು ತಿಳಿಸುತ್ತಾರೆ. ಹೇಗೆಂದರೆ ಚಿತ್ತಶುದ್ಧಿಯಿಲ್ಲವಾದರೆ ಶಮದಮಾದಿಸಾಧನಸಂಪತ್ತುಗಳಾಗಲಿ, ವಿವೇಕವೈರಾಗ್ಯವಿಚಾರಗಳಾಗಲಿ ದಕ್ಕಲಾರವು. ಅವುಗಳಿಲ್ಲದೆ ಬ್ರಹ್ಮಜಿಜ್ಞಾಸೆಯಾಗಲಿ ಶ್ರವಣಮನನಗಳಾಗಲಿ ಸಾಧ್ಯವಾಗುವಂತಿಲ್ಲ. ಇನ್ನು ನಿದಿಧ್ಯಾಸನವೆಲ್ಲಿಯದು? ಎಂದು ಸಾಧಕನು ಶಂಕಿಸಿರುತ್ತಾನೆ. ವೇದಾಂತದರ್ಶನದಲ್ಲಿ ಶ್ರವಣಾದಿಗಳನ್ನು ಬ್ರಹ್ಮವಿದ್ಯೆಗೆ ಸಾಕ್ಷಾತ್ ಸಾಧನಗಳೆಂದು ಒಪ್ಪಿರುತ್ತದೆ. ಶಮಾದಿಗಳನ್ನು ಅಂತರಂಗಸಾಧನಗಳೆಂದೂ ಯಜ್ಞದಾನಾದಿಗಳನ್ನು ಬಹಿರಂಗಸಾಧನಗಳೆಂದೂ ವರ್ಗೀಕರಿಸಲಾಗಿದೆ. ಯಾರು ಬಹಿರಂಗಸಾಧನಗಳನ್ನು ಮಾಡಿದ ಅನಂತರ ಅಂತಃಕರಣಶುದ್ಧಿಪೂರ್ವಕವಾಗಿ ಅಂತರಂಗಸಾಧನಗಳನ್ನೂ ಅಳವಡಿಸಿಕೊಂಡು ಜ್ಞಾನಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಂಡಿರುವರೋ ಅಂಥವರು ಶ್ರವಣಾದಿಗಳನ್ನು ಮಾಡಲು ಅರ್ಹರಾಗಿರುತ್ತಾರೆ. ಶ್ರವಣಮನನಗಳ ಅನಂತರವೇ ನಿದಿಧ್ಯಾಸನವು ಸಾಧ್ಯವಾಗಲಿದೆ. ಸಾಧಕನು ತಾನು ಮೊದಲು ಏನೂ ಮಾಡಲಾಗಲಿಲ್ಲವೆಂಬ ಪಶ್ಚಾತ್ತಾಪದಿಂದ ಈಶ್ವರನಲ್ಲಿ ಕ್ಷಮಾಯಾಚನೆ ಮಾಡಿ ಅನಂತರ ಸಾಧನಸೋಪಾನವನ್ನು ಏರಬೇಕೆಂದು ಅಭಿಪ್ರಾಯ.

**ಧ್ಯಾತ್ವಾ ಚಿತ್ತೇ ಶಿವಾಖ್ಯಂ ಪ್ರಚುರತರಧನಂ ನೈವ ದತ್ತಂ ದ್ವಿಜೇಭ್ಯೋ
ಹವ್ಯಂ ತೇ ಲಕ್ಷಸಂಖ್ಯೈಃ ಹುತವಹವದನೇ ನಾರ್ಪಿತಂ ಬೀಜಮಂತ್ರೈಃ।
ನೋ ತಪ್ತಂ ಗಾಂಗತೀರೇ ವ್ರತಜಪನಿಯಮೈಃ ರುದ್ರಜಾಪ್ಯಂ ನ ಜಪ್ತಂ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ
ಶ್ರೀ ಮಹಾದೇವ ಶಂಭೋ ॥೮॥**

೮. ಮನಸ್ಸಿನಲ್ಲಿ ಶಿವನನ್ನು ಸ್ಮರಿಸಿ ಬಹಳವಾದ ಹಣವನ್ನು ಬ್ರಾಹ್ಮಣರಿಗೆ ದಾನಮಾಡಲಿಲ್ಲ. ಎಲೈ ಶಿವನೆ, ನಿನ್ನ ಬೀಜಮಂತ್ರಗಳಿಂದ ಹವ್ಯವಾದ ಪದಾರ್ಥವನ್ನು ಅಗ್ನಿಯ ಮುಖದಲ್ಲಿ ಲಕ್ಷಸಂಖ್ಯೆಯಿಂದ ಸಮರ್ಪಿಸಲಿಲ್ಲ. ಇನ್ನು ವ್ರತಜಪನಿಯಮಗಳಿಂದ ಗಂಗಾತೀರದಲ್ಲಿ ಕುಳಿತು ತಪಸ್ಸುಮಾಡಲಿಲ್ಲ. ಎಲೈ ಶಿವನೆ, ಮಹಾದೇವನೆ, ಶಂಭುವೆ, ನನ್ನ ಅಪರಾಧಗಳನ್ನು ಕ್ಷಮಿಸುವವನಾಗು ಎಂದರ್ಥ.

## ವಿವರಣೆ

ಈ ಶ್ಲೋಕದಲ್ಲಿ ಶಿವನನ್ನು ಕುರಿತು ಮಾಡಬೇಕಾಗಿದ್ದ ಯಜ್ಞದಾನ ತಪಸ್ಸುಗಳನ್ನು ಮಾಡಲಿಲ್ಲವೆಂಬ ಅಪರಾಧಕ್ಷಮಾಪಣೆಯನ್ನು ಕೇಳಿಕೊಳ್ಳಲಾಗಿದೆ. ಯಜ್ಞ-ದಾನ-ತಪ್ಪಸ್ಸುಗಳನ್ನು ಯಾರೂ ಬಿಡಬಾರದು. ಮಾಡಲೇ ಬೇಕು. ಏಕೆಂದರೆ ಅವು ಚಿತ್ತಶುದ್ಧಿಕರಗಳಾಗಿವೆ-ಎಂದು ಗೀತೆಯಲ್ಲಿ ಭಗವಂತನು ತಿಳಿಸಿದ್ದಾನೆ. ಆದ್ದರಿಂದ ಶಿವಪ್ರೀತಿಗಾಗಿ ಇವುಗಳನ್ನು ಮಾಡಬೇಕು. ಇವುಗಳಲ್ಲಿ ದಾನವನ್ನು ಮೊದಲು ಪ್ರಸ್ತಾಪಿಸಲಾಗುವದು. ಇದೊಂದು ವೈದಿಕ ಕರ್ಮವು. ಆದ್ದರಿಂದ ವಿಧಿವತ್ತಾಗಿಯೇ ಮಾಡಬೇಕು. ತಾನು ಕಷ್ಟಪಟ್ಟು ಸಂಪಾದಿಸಿದ ದ್ರವ್ಯವನ್ನೇ ಶಿವನನ್ನು ಸ್ಮರಿಸುತ್ತಾ ಪುಣ್ಯಕ್ಷೇತ್ರಗಳಲ್ಲಿ ಗ್ರಹಣ, ಸಂಕ್ರಾತಿ-ಮುಂತಾದ ಕಾಲಗಳಲ್ಲಿ ಯೋಗ್ಯರಾದ ಬ್ರಾಹ್ಮಣರಿಗೇ ದಾನಮಾಡಬೇಕು. ದಾನವನ್ನು ಪಡೆದುಕೊಳ್ಳುವವರಿಂದ ಪ್ರತ್ಯುಪಕಾರವನ್ನು ಬಯಸಬಾರದು. ಹೀಗೆ ದೇಶಕಾಲಪಾತ್ರಗಳನ್ನು ವಿವೇಚನೆಮಾಡಿ ಈಶ್ವರಪ್ರೀತ್ಯರ್ಥವಾಗಿ ವಿತ್ತಶಾಠ್ಯವಿಲ್ಲದೆ ಕೊಡುವ ದಾನವು ಅಂತಃಕರಣಕ್ಕೆ ಸಂಸ್ಕಾರವನ್ನುಂಟು ಮಾಡುವದು. ವಿತ್ತಶಾಠ್ಯವೆಂದರೆ ದಾನಮಾಡಲು ಶಕ್ತಿಯಿದ್ದರೂ ಜಿಪುಣತನದಿಂದ ಅಲ್ಪವಾಗಿ ಕೊಡುವಿಕೆಯು. ಇದು ದಾನಫಲವನ್ನು ಕೊಡುವದಿಲ್ಲ. ಕೆಲವರು ದಾನದ ಪಂಚೆ, ಛತ್ರಿ, ಪಾತ್ರೆಗಳು-ಎಂದೇ ಹುಡುಕಿ ಕೆಲಸಕ್ಕೆ ಬಾರದಂಥ ತೀರ ಅಗ್ಗವಾದ ಪದಾರ್ಥಗಳನ್ನು ಕೊಂಡು ದಾನಮಾಡುತ್ತಾರೆ. ಅದನ್ನು ಕೊಡುವಾಗ ಪೊಗಳಿಕೆಗಾಗಿ ಭಾವಚಿತ್ರವನ್ನೂ ತೆಗೆಯಿಸಿಕೊಳ್ಳುತ್ತಾರೆ. ಇದು ಖಂಡಿತವಾಗಿಯೂ ಸರಿಯಲ್ಲ. ದಾನವು ಗೋಪ್ಯವಾಗಿರಬೇಕು. ಬೆಲೆಬಾಳುವ ಉತ್ತಮವಸ್ತುಗಳಿಂದ ಕೂಡಿದ್ದು ತೆಗೆದುಕೊಂಡವನಿಗೆ ಆ ವಸ್ತುಗಳು ಉಪಯೋಗಕ್ಕೆ ಬರುವಂತೆಯೂ ಇರಬೇಕು. ಇಂಥ ದಾನವು ಶಿವಪ್ರೀತಿಕರವಾಗುವದು. ಹೀಗೆ ನಾನು ದಾನಮಾಡಲಿಲ್ಲವೆಂದು ಸಾಧಕನು ತಿಳಿಸುತ್ತಾನೆ.

ಈಗ ಯಜ್ಞದ ವಿಚಾರವನ್ನು ನೋಡೋಣ. ಭಾರಿಭಾರಿಯ ವೈದಿಕ ಯಜ್ಞಗಳನ್ನು ಮಾಡದಿದ್ದರೂ " ಓಂ ನಮಃ ಶಿವಾಯ " ಎಂಬ ಪಂಚಾಕ್ಷರೀ ಮಂತ್ರದಿಂದಲಾದರೂ ಅಗ್ನಿಯಲ್ಲಿ ಹೋಮಮಾಡಬಹುದಾಗಿತ್ತು. ಹೋಮ ದ್ರವ್ಯವಾಗಿ ಕೇವಲ ತುಪ್ಪವನ್ನಾದರೂ ಬಳಸಬಹುದಾಗಿತ್ತು. ಯೋಗ್ಯತೆಯುಳ್ಳವನಾದರೆ ದೊಡ್ಡ ದೊಡ್ಡ ಯಾಗಗಳನ್ನೇ ಕೈಗೊಳ್ಳಬಹುದು. ಮಹಾರುದ್ರ, ಅತಿರುದ್ರ-ಮುಂತಾದ ಪ್ರಸಿದ್ಧವಾದ ಯಾಗಗಳೂ ಇವೆ ಅಂಥವುಗಳನ್ನೂ ಅನೇಕರು ನಡೆಸುತ್ತಾರೆ. ಸಾಮಾನ್ಯರಾದವರು ಲಘು ರುದ್ರಹೋಮವನ್ನು ಮಾಡಬಹುದು. ಅಂತೂ ಶಿವಪ್ರೀತಿಗಾಗಿ ಅಗ್ನಿಯಲ್ಲಿ ದ್ರವ್ಯಸಮರ್ಪಣೆಮಾಡುವಂಥ ಯಾವದೇ ಹೋಮವನ್ನಾದರೂ ಮಾಡಿದಲ್ಲಿ ಅದು ಚಿತ್ತಶುದ್ಧಿಗೆ ಕಾರಣವಾಗುತ್ತದೆ. ಇಲ್ಲಿ ಲಕ್ಷಸಂಖ್ಯೆಯಲ್ಲಿ ಹೋಮಮಾಡಲ್ಲಿಲ್ಲವೆಂದು ಪ್ರಸ್ತಾಪಿಸಿರುವದರಿಂದ ಅದೇ ಕನಿಷ್ಠವೆಂದೂ ಕಂಡುಬರುತ್ತದೆ. ಅದಕ್ಕಿಂತ ಮಿಗಿಲಾದ ಕೋಟಿಸಂಖ್ಯೆಯ ಹೋಮವೂ ಕೂಡ ರುದ್ರನ ಮಟ್ಟದಿಂದ ಅಲ್ಪವೇ ಎಂದರ್ಥ. ಹೇಗೆ ಇರಲಿ-ಲಕ್ಷಹೋಮವನ್ನೇ ಕೈಗೊಂಡಾಗಲೂ ತಾನು ಮಾಡಿದೆನು ಎಂಬ ಅಹಂಕಾರವಿರಬಾರದು-ಎಂಬುದರಲ್ಲಿ ತಾತ್ಪರ್ಯವನ್ನು ಗ್ರಹಿಸಬೇಕು.

ಇನ್ನು ಜಪ ಅಥವಾ ತಪಸ್ಸಿನ ವಿಚಾರಮಾಡೋಣ. ತಪಸ್ಸು ಎಂಬಿದನ್ನು ಉಪಲಕ್ಷಣವಾಗಿ ತೆಗೆದುಕೊಂಡರೆ ಜಪ, ಪಾರಾಯಣ, ಪುರಶ್ಚರಣಾದಿಗಳನ್ನೆಲ್ಲ ಗ್ರಹಿಸಬಹುದು. ಶ್ರೀ ರುದ್ರನ ಪಂಚಾಕ್ಷರೀಮಂತ್ರವನ್ನು ಗಂಗಾತೀರದಲ್ಲಿ ಕುಳಿತು ಜಪಿಸಬೇಕು. ಅದಾಗದಿದ್ದರೆ ಯಾವದೇ ನದಿ, ಕೆರೆ ದಂಡೆಗಳಲ್ಲಿಯಾದರೂ ಕುಳಿತು ಮಂತ್ರಜಪಮಾಡಬಹುದು. ಇದೇ ತಪಸ್ಸೆನಿಸುವದು. ಜಪದ ಜೊತೆಗೆ ಉಪವಾಸವನ್ನೂ ಕೈಗೊಂಡರೆ ಹೆಚ್ಚಿನ ತಪಸ್ಸಾಗುವದು. ಇನ್ನು ರುದ್ರಾಧ್ಯಾಯದ ಮಂತ್ರಗಳನ್ನೇ ಕ್ರಮಬದ್ಧವಾಗಿ ಅವರ್ತನಮಾಡಿದರೆ ರುದ್ರಜಪವೆನಿಸುವದು. ಅದುಕೂಡ ತಪಸ್ಸೆನಿಸುವದು. ರುದ್ರಮಂತ್ರವನ್ನು ಜಪಿಸುವಾಗ ಮಂತ್ರಗಳ ಸ್ವರಾಕ್ಷರಗಳಿಗೆ ಲೋಪವಾಗದಂತೆ ನಿಧಾನವಾಗಿ ಸ್ಪಷ್ಟವಾಗಿ ಜಪಿಸಬೇಕು. ಮಂತ್ರಗಳು ಬಾರದವರು ಶಿವನಾಮವನ್ನೇ ಜಪಿಸಬಹುದು. ಆಯಾ ಮಂತ್ರಾರ್ಥವನ್ನು ಭಾವನೆಮಾಡುತ್ತಾ ಪುರಶ್ಚರಣೆಮಾಡಿದರೆ ಉತ್ಕೃಷ್ಟವಾದ ಜಪವಾಗುವದು. ಇಂಥ ಜಪವನ್ನಾಗಲಿ, ತಪಸ್ಸನ್ನಾಗಲಿ, ಯಜ್ಞವನ್ನಾಗಲಿ, ದಾನವನ್ನಾಗಲಿ ತಾನು ಮಾಡಲಿಲ್ಲವಲ್ಲ-ಎಂದು ಪಶ್ಚಾತ್ತಾಪದಿಂದ ಸಾಧಕನು ಈ ಶ್ಲೋಕದಲ್ಲಿ ರುದ್ರನ ಕ್ಷಮೆಯನ್ನು ಬೇಡುತ್ತಿದಾನೆ. ಆದ್ದರಿಂದ ಜೀವನದಲ್ಲಿ ಕಿಂಚಿತ್ತಾದರೂ ನಾವು ಜಪದಾನಯಜ್ಞಾದಿಗಳನ್ನು ಕೈಗೊಳ್ಳಬೇಕು-ಎಂದಭಿಪ್ರಾಯ.

**ನಗ್ನೋ ನಿಃಸಂಗಶುದ್ಧ ಸ್ತ್ರಿ ಗುಣವಿರಹಿತೋ ಧ್ವಸ್ತ ಮೋಹಾಂಧಕಾರೋ**
**ನಾಸಾಗ್ರೇ ನ್ಯಸ್ತದೃಷ್ಟಿರ್ವಿದಿತಭವಗುಣೋ ನೈವ ದೃಷ್ಟಃ ಕದಾಜಿತ್।**

**ಉನ್ಮನ್ಯಾವಸ್ಥಯಾ ತ್ವಾಂ ವಿಗತಗತಿಮತಿಃ ಶಂಕರಂ ನ ಸ್ಮರಾಮಿ**
**ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ**
**ಶ್ರೀ ಮಹಾದೇವ ಶಂಭೋ ॥೯॥**

೯. "ನಾನು ದಿಗಂಬರನಾಗಿ ನಿಸ್ಸಂಗನಾಗಿ ಶುದ್ಧನಾಗಿ ತ್ರಿಗುಣಗಳನ್ನು ಮೀರಿದವನಾಗಿ ಮೋಹಾಂಧಕಾರವನ್ನು ಕಳೆದುಕೊಂಡವನಾಗಿ ಹಾಗೂ ಮೂಗಿನ ತುದಿಯಲ್ಲಿ ನೆಟ್ಟದೃಷ್ಟಿಯುಳ್ಳವನಾಗಿ ಸಂಸಾರದ ಗುಣ (ದೋಷ) ಗಳನ್ನು ಬಲ್ಲವನಾಗಿ ನಿನ್ನನ್ನು ಧ್ಯಾನಿಸುತ್ತಾ ಯಾವಾಗಲೂ ಸಾಕ್ಷಾತ್ಕಾರ ಮಾಡಿಕೊಳ್ಳಲಿಲ್ಲ. ಆದರೆ ಹುಚ್ಚನಂತೆ ಆಗಿರುವ ಪರಿಸ್ಥಿತಿಯಲ್ಲಿ ಬುದ್ಧಿಯ ಸಮತೋಲನವನ್ನು ಕಳೆದುಕೊಂಡು ಶಂಕರನನ್ನು ನೆನೆಯಲಿಲ್ಲ. ಎಲೈ ಶಿವನೆ, ಮಹಾದೇವನೆ, ಶಂಭುವೆ-ನನ್ನ ಅಪರಾಧಗಳನ್ನು ಕ್ಷಮಿಸುವವನಾಗು " ಎಂದರ್ಥ.

## ವಿವರಣೆ

ಈ ಶ್ಲೋಕದಲ್ಲಿ ಪರಮೇಶ್ವರನನ್ನೇ ಧ್ಯಾನಮಾಡುತ್ತಾ ಸಾಕ್ಷಾತ್ಕಾರ ಮಾಡಿಕೊಳ್ಳುವಂಥ ದಿವ್ಯಜೀವನಕ್ಕೂ ಸಂಸಾರದಲ್ಲೇ ಮುಳುಗಿ ಹುಚ್ಚನಂತೆ ಅಲೆಯುತ್ತಾ ಬುದ್ಧಿಪ್ರಮಾದದಿಂದ ಶಿವನನ್ನು ಮರೆತು ಕಾಲಯಾಪನೆಮಾಡುವ ಕ್ಷುದ್ರಜೀವನಕ್ಕೂ ಇರುವ ವ್ಯತ್ಯಾಸವನ್ನು ತಿಳಿಸಲಾಗಿದೆ. ದಿವ್ಯಜೀವನವನ್ನು ಮೊದಲು ವಿಚಾರಮಾಡೋಣ. ಉತ್ತಮಸಂಸ್ಕಾರವುಳ್ಳ ಸಾಧಕನಾದರೆ ಸಂಸಾರವನ್ನು ದೂರಮಾಡಿ ಮೊದಲು ನಗ್ನನಾಗುತ್ತಾನೆ. ನಗ್ನ ಎಂದರೆ ಬೆತ್ತಲೆ ಎಂಬರ್ಥವಿದೆ. ವ್ಯವಹಾರಪ್ರಪಂಚದಲ್ಲಿ ಬಟ್ಟೆಯನ್ನು ಧರಿಸದೆ ಬರಿಮೈಯಲ್ಲಿ ಇರುವವನನ್ನು ನಗ್ನನೆನ್ನುವರು. ಆದರೆ ಆಧ್ಯಾತ್ಮಿಕಪ್ರಪಂಚದಲ್ಲಿ ನಗ್ನನೆಂದರೆ ಅಭಿಮಾನರಹಿತನೆಂದರ್ಥ. ಮೂರು ಅಥವಾ ನಾಲ್ಕು ವಯಸ್ಸಿನ ಮಕ್ಕಳನ್ನು ನೋಡಿರಿ. ಅವು ಬರಿಮೈಯಲ್ಲಿದ್ದರೂ ನಾಚಿಕೆಪಡುವದಿಲ್ಲ. ಏಕೆಂದರೆ ನಮ್ಮಂತೆ ಅವುಗಳಿಗೆ ದೇಹಾಭಿಮಾನವಿರುವದಿಲ್ಲ. ಆದ್ದರಿಂದ ಬಟ್ಟೆಯನ್ನು ಧರಿಸುವದು-ಧರಿಸದೆ ಇರುವದಕ್ಕಿಂತಲೂ ಅಭಿಮಾನವಿಲ್ಲದಿರುವಿಕೆಯೇ ನಗ್ನತ್ವವು. ಹೀಗೆ ನಾನು ದೇಹಾಭಿಮಾನವನ್ನು ಬಿಟ್ಟವನಾಗಿ ನಿಃಸಂಗನಾಗಿ ಶುದ್ಧನಾಗಿ ನಿನ್ನನ್ನು ನೆನೆಯಲಿಲ್ಲ- ಎಂದು ಸಾಧಕನು ತಿಳಿಸುತ್ತಿದಾನೆ. ನಿಸ್ಸಂಗವೆಂದರೆ ಪ್ರಾಪಂಚಿಕವಾದ ಭೋಗವಸ್ತುಗಳಲ್ಲಿ ಆಶೆಯಿಲ್ಲದೆ ಇರುವದು. ಶುದ್ಧಿ ಎಂದರೆ ಶರೀರ- ವಾಕ್ಕು- ಮನಸ್ಸುಗಳ ನಿರ್ಮಲತೆಯು. ಶಿವನ ಧ್ಯಾನಕ್ಕೆ ಇವು ಬೇಕಾಗಿರುತ್ತವೆ. ಹಾಗೆಯೇ ಸತ್ತ್ವ ಗುಣಸಂಪನ್ನನಾಗಿರುವದು ಸಾಧ್ಯವಿದೆ. ಆದ್ದರಿಂದ ಸತ್ತ್ವಗುಣದಲ್ಲೇ ಮಲಿನಸತ್ತ್ವದಿಂದ ಬಿಡುಗಡೆ ಹೊಂದಿದರೆ ತ್ರಿಗುಣಾ ತೀತನೆನಿಸುವನು. ಆಗ ಮೋಹಾಂಧಕಾರದಿಂದಲೂ ಬಿಡುಗಡೆಯಾಗುತ್ತದೆ. ಅನಂತರ ಶಿವನನ್ನು ತನ್ನ ಹೃದಯದಲ್ಲಿ ಚಿಂತಿಸುವಾಗ ಏಕಾಗ್ರತೆಯ ಸಿದ್ಧಿಗಾಗಿ ಮೂಗಿನ ತುದಿಯನ್ನು ನೋಡುತ್ತಾ ಕಣ್ಣುಗಳ ಚಾಂಚಲ್ಯವನ್ನು ಕಳೆದುಕೊಳ್ಳಬೇಕು. ದೃಷ್ಟಿಯು ಏಕಾಗ್ರವಾದಲ್ಲಿ ಒಳಗಿನ ಚಿಂತನೆಯೂ ಧಾರಾಕಾರವಾಗಿ ಪ್ರವಹಿಸುತ್ತದೆ. ಶಿವಚಿಂತನೆಯೇ

ನಿರಂತರವಾಗಿ ಮುಂದುವರೆದಲ್ಲಿ ಸಂಸಾರದ ಚಿಂತನೆಯು ತೊಲಗುತ್ತದೆ. ಹಾಗೂ ಸಂಸಾರದ ದೋಷಗಳು ಎದ್ದು ಕಾಣುವವು. ಈ ದೋಷದರ್ಶನದಿಂದ ವೈರಾಗ್ಯವೂ ವೈರಾಗ್ಯಬಲದಿಂದ ವಿವೇಕವೂ ಆದರಿಂದ ಚಿತ್ತಶುದ್ಧಿಯ ಮೂಲಕ ದೃಢವಾದ ಶಿವಧ್ಯಾನವೂ ದಕ್ಕುವದು. ಧ್ಯಾನವು ಪಕ್ವವಾದಂತೆಲ್ಲ ಶಿವನ ಸಾಕ್ಷಾತ್ಕಾರವಾಗುವದು. ಇದು ದಿವ್ಯಜೀವನವೆನಿಸುವದು. ದಿವ್ಯಜೀವನವನ್ನು ಒಂದೇಬಾರಿಗೆ ಸಾಧಿಸಲಾಗುವದಿಲ್ಲ. ಪ್ರಯತ್ನದಿಂದ ದಕ್ಕಿಸಿಕೊಳ್ಳಬೇಕು. ಹೀಗೆ ನಾನು ದಿವ್ಯಜೀವನದಿಂದ ನಿನ್ನನ್ನು ಕಾಣದೆ ಅಪರಾಧಮಾಡಿರುತ್ತೇನೆ. ನೀನು ಕ್ಷಮಿಸಬೇಕು-ಎಂದು ಸಾಧಕನು ಕೇಳಿಕೊಂಡಿರುತ್ತಾನೆ.

ಈಗ ಮಲಿನಜೀವನವನ್ನು ವಿಚಾರಮಾಡೋಣ. ಇದು ತ್ಯಾಗಕ್ಕಾಗಿಯೇ ಹೊರತು ಅನುಸರಿಸುವದಕ್ಕಲ್ಲ. ಮಲಿನಜೀವನದಲ್ಲಿ ಮನಸ್ಸು ಮೊದಲನೆಯದಾಗಿ ವಿಷಯಗಳಲ್ಲಿ ಅಂಟಿಕೊಂಡಿರುತ್ತದೆ. ಶರೀರಾದಿಗಳಲ್ಲಿಯೂ ಮನೆ, ಹಣ, ಕಾಸು, ಕುಟಂಬದಲ್ಲಿಯೂ ಅಭಿಮಾನವು ನೆಲಸಿರುತ್ತದೆ. ಇದರಿಂದ ನಗ್ನತ್ವವು ಸಿದ್ಧಿಸದೆ ಇರುವದು. ನಿಃಸಂಗವೂ ಈ ಜೀವನದಲ್ಲಿ ದೊರೆಯುವದಿಲ್ಲ. ಏಕೆಂದರೆ ಮನಸ್ಸು ಸದಾಕಾಲವೂ ಏನಾದರೊಂದು ಕಾಮವನ್ನು ಸಂಕಲ್ಪಿಸುತ್ತಿರುತ್ತದೆ. ಇಂಥ ಇಂದ್ರಿಯಮನಶ್ಚಾಂಚಲ್ಯನಿಮಿತ್ತ ಅಂತಃಕರಣವು ಕದಡಿಹೋಗಿರುತ್ತದೆ. ಶುದ್ಧವಾಗಿರುವದಿಲ್ಲ. ರಜಸ್ತಮೋಗುಣಗಳೇ ಮನಸ್ಸಿಗೆ ಮೆತ್ತಿಕೊಂಡಿರುವವು. ನಿಸ್ತ್ರೈಗುಣ್ಯನಾಗಿರುವಿಕೆಯು ಸಾಧ್ಯವಾಗುವದಿಲ್ಲ. ಹೀಗಾಗಿ ಅಜ್ಞಾನವೂ ರಾಗದ್ವೇಷಗಳೂ ಚೆನ್ನಾಗಿ ಮೊಳೆತು ಶಿವನ ಧ್ಯಾನವು ದೂರವೇ ಆಗಿರುವದು. ಆಗ ಶಿವನ ಸಾಕ್ಷಾತ್ಕಾರವಾದರೂ ಹೇಗೆ ದೊರಕೀತು? ಆದ್ದರಿಂದ ಈ ಮಲಿನಜೀವನದಲ್ಲಿ ಕಾಲವನ್ನು ನೂಕಿದಂತೆಲ್ಲ ಬುದ್ಧಿಯು ವಿವೇಕವನ್ನು ಕಳೆದುಕೊಂಡು ಹುಚ್ಚುಹುಚ್ಚಾಗಿ ವಿಷಯಾಭಿಧ್ಯಾನದಿಂದ ಸಂಗವೂ ಕಾಮವೂ ಕ್ರೋಧವೂ ಅದರಿಂದ ಸಂಮೋಹವೂ ಆಗುವದು. ಇದೇ ಉನ್ಮನ್ಯಾವಸ್ಥೆಯು. ಇಂಥ ಸ್ಥಿತಿಯಲ್ಲಿ ಏನೇನೂ ಶುಭವಾಸನೆಗಳು ಅಂತಃಕರಣದಲ್ಲಿ ಉಳಿದಿರಲಾರವಾದ್ದರಿಂದ ಶಂಕರನನ್ನು ನೆನೆಯುವದು ಬಹುದೂರವಾಗಿಯೇ ಉಳಿದುಬಿಡುವದು. ಆದ್ದರಿಂದ ಮಲಿನಜೀವನಕ್ಕೆ ವಶನಾಗದೆ ಇರಬೇಕು-ಎಂದಭಿಪ್ರಾಯ. ಈವರೆಗೆ ಇಂಥ ಮಲಿನಜೀವನವನ್ನೇ ಸಾಗಿಸಿ ಶಿವನನ್ನು ನೆನೆಯದೆ ಅಪರಾಧಮಾಡಿದ್ದಕ್ಕಾಗಿ ಎಲೈ ಮಹಾದೇವನೆ, ನನ್ನನ್ನು ಕ್ಷಮಿಸು-ಎನಿಸ್ತ್ರೈ ಕೇಳಿಕೊಳ್ಳಲಾಗಿದೆ.

**ಸ್ಥಿತ್ವಾ ಸ್ಥಾನೇ ಸರೋಜೇ ಪ್ರಣವಮಯಮರುತ್ಕುಂಭಿತೇ ಸೂಕ್ಷ್ಮಮಾರ್ಗೇ**
**ಶಾಂತೇ ಸ್ವಾಂತೇ ಪ್ರಲೀನೇ ಪ್ರಕಟಿತವಿಭವೇ ದಿವ್ಯರೂಪೇ ಶಿವಾಖ್ಯೇ।**
**ಲಿಂಗಾಗ್ರೇ ಬ್ರಹ್ಮವಾಕ್ಯೇ ಸಕಲತನುಗತಂ ಶಂಕರಂ ನ ಸ್ಮರಾಮಿ**

ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ
ಶ್ರೀ ಮಹಾದೇವ ಶಂಭೋ ॥೧೦॥

೧೦. " ಹೃದಯಕಮಲಸ್ಥಾನದಲ್ಲಿ ನೆಲೆನಿಂತು ಓಂಕಾರಮಯವಾದ ಸೂಕ್ಷ್ಮವಾದ ವಾಯುಮಾರ್ಗದಿಂದ ಪ್ರಾಣವನ್ನು ನಿರೋಧಮಾಡಿ ಶಾಂತವೂ ತನ್ನೊಳಗೇ ತಾನೇ ತಾನಾಗಿ ನೆಲೆಗೊಂಡಿರುವದೂ ಆಗ್ಗಿದ್ದು ದ್ವೈತವನೆಲ್ಲ ಅಡಗಿಸಿಕೊಂಡಿರುವದಾಗಿ ಸ್ವಮಹಿಮೆಯನ್ನು ಪ್ರಕಟಿಸುತ್ತಾ ಪರ ಎಂಬ ಹೆಸರಿನಿಂದ ವಿರಾಜಮಾನವಾದ ದಿವ್ಯರೂಪದಲ್ಲಿ, ಲಿಂಗಾಗ್ರದಲ್ಲಿ, ವೇದವಾಕ್ಯಾನುಗುಣವಾಗಿ ಎಲ್ಲಾ ಪ್ರಾಣಿಗಳ ಶರೀರವನ್ನೂ ವ್ಯಾಪಿಸಿಕೊಂಡಿರುವ ಶಂಕರನನ್ನು ನಾನು ನೆನೆಯಲಿಲ್ಲ. ಎಲೈ ಶಿವನೆ, ಮಹಾದೇವನೆ, ಶಂಭುವೆ-ನನ್ನ ಅಪರಾಧವನ್ನು ಕ್ಷಮಿಸುವವನಾಗು" -ಎಂದರ್ಥ.

## ವಿವರಣೆ

ಈ ಶ್ಲೋಕದಲ್ಲಿ ಯೋಗಮಾರ್ಗದಿಂದ ಹೃದಯವನ್ನು ಪ್ರವೇಶಿಸಿ ಅಲ್ಲಿರುವ ಶಿವನನ್ನು ನೆನೆಯದೆ ಹೋಗಿರುವದಕ್ಕಾಗಿ ಉಂಟಾಗಿರುವ ಅಪರಾಧವನ್ನು ಮನ್ನಿಸಬೇಕೆಂದು ಕೇಳಲಾಗಿದೆ. ಉಪಾಸಕರಾದವರಿಗೆ ಶಿವನ ಚಿಂತನೆಗೆ ಹೊರಗಿನ ಸಾಧನಸಾಮಗ್ರಿಗಳೇನೂ ಬೇಕಿರುವದಿಲ್ಲ. ಯಾರಿಗೆ ತಮ್ಮೊಳಗೇ ಇರುವ ಶಿವನನ್ನು ಗುರುತಿಸಲಾಗದೆ ಇರುವಂಥ ಪರಿಸ್ಥಿತಿಯಿರುವದೋ ಅಂಥ ಮಂದಾಧಿಕಾರಿಗಳಿಗೆ ಲಿಂಗದಲ್ಲಿ ಅಥವಾ ಭಾವಚಿತ್ರ, ಪ್ರತಿಮಾದಿಗಳಲ್ಲಿ ಶಿವನನ್ನು ಭಾವಿಸುತ್ತಾ ಪೂಜಾ-ಧ್ಯಾನಾದಿಗಳನ್ನು ಕೈಗೊಳ್ಳಬೇಕೆಂದು ಹೇಳಿರುತ್ತದೆ. ಆದರೆ ಮನನಶೀಲರಾದವರಿಗೆ ಶಿವಧ್ಯಾನಕ್ಕೆ ಅವರವರ ಶರೀರವೇ ಸಾಕಾಗಿರುತ್ತದೆ. ಅಂಥವರು ತಮ್ಮ ದೇಹವನ್ನೇ ದೇವಾಲಯವಾಗಿ ಮಾರ್ಪಡಿಸಿಕೊಂಡಿರುತ್ತಾರೆ. ಆ ದೇಹ ದೇವಾಲಯದಲ್ಲಿ ಹೃದಯವೆಂಬ ಕಮಲಪೀಠವಿರುತ್ತದೆ. ಸಾಮಾನ್ಯಸ್ಥಿತಿಯಲ್ಲಿ ಅದು ಮೊಗ್ಗಾಗ್ಗಿರುವದು. ಯೋಗಸಾಧನೆಯಿಂದ ಅದನ್ನು ನೆಟ್ಟಗೆ ಮಾಡಿ ಅರಳಿಸಬೇಕು, ಆಗ ಪದ್ಮಪೀಠವೆಂಬ ಸ್ಥಾನವು ಶಿವನ ಧ್ಯಾನಕ್ಕೆ ಅಣಿಯಾಗುವದು. ಅಲ್ಲಿಯೇ ಶಿವನು ಯಾವಾಗಲೂ ಸನ್ನಿಹಿತನಾಗಿಯೂ ಇರುವನು. ಆ ಸ್ಥಾನದಲ್ಲಿ ಮನಸ್ಸನ್ನು ನೆಲೆಗೊಳಿಸುವದಕ್ಕಾಗಿ ಓಂಕಾರವನ್ನು ಬಳಸಿ ಪ್ರಾಣಾಯಾಮಸಾಧನದಿಂದ ಮನಸ್ಸನ್ನು ಒಳಸೊಗಿಸಬೇಕಾಗುವದು. ಪ್ರಾಣಾಯಾಮದಿಂದ ಚಿತ್ತವೃತ್ತಿಯನ್ನು ನಿರೋಧಮಾಡಿದರೆ ಅಲ್ಲಿರುವ ಸುಷುಮ್ನಾಮಾರ್ಗದಿಂದ ಮೆಲ್ಲನೆ ಶಿವತತ್ತ್ವವನ್ನು ಸೇರಬಹುದು. ಅದು ಪರಮಶಾಂತವೂ ತಾನೇತಾನಾಗಿ ಸುಖರೂಪವಾಗಿರುವದೂ ಆಗಿರುವದು. ಮತ್ತು ಅಲ್ಲಿ ದ್ವೈತವೆಲ್ಲವೂ ಲಯವಾಗಿದ್ದು ಪ್ರಪಂಚೋಪಶಮವೆನಿಸಿರುವದು. ಯಾವ ಸಾಧಕನು ತನ್ನೊಳಗೇ ಇರುವ ಈ ತತ್ತ್ವವನ್ನು ಸಮೀಪಿಸುವನೋ ಅವನಿಗೆ ಅದು ಮೊದಲು ಜ್ಯೋತಿರೂಪವಾಗಿ ತೋರಿಕೊಳ್ಳುವದು. ಈ ದಿವ್ಯರೂಪವನ್ನೇ ಚಿಂತಿಸಿದಂತೆಲ್ಲ ಅದು ಶಿವವಾಗಿ ಅನುಭವಗಮ್ಯವಾಗುವದು.

ಅದೇ ಲಿಂಗಾಗ್ರದಲ್ಲಿಯೂ ಬ್ರಹ್ಮವಾಕ್ಯದಲ್ಲಿಯೂ ಇದ್ದುಕೊಂಡಿರುವದು. ಇದನ್ನು ಕಂಡಾಗ ಎಲ್ಲಾ ಶರೀರಗಳಲ್ಲಿಯೂ ಇದೇ ಶಿವತತ್ತ್ವವೇ ಇದೆ-ಎಂಬ ಅನುಭವವಾಗುವದು.

ಈಗ ಲಿಂಗಾಗ್ರವೆಂದರೇನು? ಬ್ರಹ್ಮವಾಕ್ಯವೆಂದರೇನು? ಎಂಬಿದನ್ನು ವಿಚಾರಮಾಡೋಣ. ಲಿಂಗದ ತುದಿಯು ಲಿಂಗಾಗ್ರವು. ಅಲ್ಲಿರುವವನೇ ಶಿವನು-ಎಂದು ಅಕ್ಷರಾರ್ಥವಾದರೂ ಬ್ರಹ್ಮವನ್ನೇ ಗುರುತಿಸಿ ತಿಳಿಸುವಂಥ ವೇದಾಂತೋಪನಿಷದ್ವಾಕ್ಯಗಳೇ ಲಿಂಗಾಗ್ರಗಳು-ಎಂದು ತಿಳಿಯಬೇಕು. ಏಕೆಂದರೆ ಉಪನಿಷತ್ತುಗಳನ್ನು ಬಿಟ್ಟರೆ ಬ್ರಹ್ಮಪ್ರತಿಪತ್ತಿಗೆ ಬೇರೆಯ ಹಾದಿಯಿರುವದಿಲ್ಲ. ಬ್ರಹ್ಮವನ್ನು ಔಪನಿಷದಪುರುಷನೆಂದೇ ವೇದಾಂತಗಳಲ್ಲಿ ಹೆಸರಿಸಲಾಗಿದೆ. ಏಕೆಂದರೆ ಉಪನಿಷತ್ತುಗಳಲ್ಲಿಮಾತ್ರವೇ ಅದನ್ನು ಹುಡುಕಿ ಕಂಡುಕೊಳ್ಳಬೇಕಾಗಿದೆ. ಲಿಂಗವೆಂದರೆ "ಲೀನಾಮರ್ಥಂ ಗಮಯತೀತಿ ಲಿಂಗಮ್" ಎಂಬ ವ್ಯುತ್ಪತ್ತಿಯಂತೆ ಒಳಗೆ ಅಡಗಿರುವ ವಸ್ತುವನ್ನು ಎತ್ತಿ ತೋರಿಸುವದೇ ಲಿಂಗವು. ಈ ಅಭಿಪ್ರಾಯದಂತೆ ಉಪನಿಷದ್ವಾಕ್ಯಗಳು ಬ್ರಹ್ಮಲಿಂಗವೆನಿಸಿರುವವು. ಆದ್ದರಿಂದಲೇ ಬ್ರಹ್ಮ(ಪ್ರತಿಪಾದಕ)ವಾಕ್ಯಗಳೆಂದೂ ಅವುಗಳನ್ನು ಕರೆಯುತ್ತಾರೆ. ಇವು ಶಿವನನ್ನು ತಾತ್ಪರ್ಯದಿಂದ ಪ್ರತಿಪಾದಿಸುತ್ತವೆ. ಶಿವನೆಂದರೂ ಬ್ರಹ್ಮವೆಂದರೂ ಒಂದೇ-ಎಂದು ತಿಳಿಯಬೇಕು. ಈ ಉಪನಿಷದ್ವಾಕ್ಯಗಳು ಸಕಲತನುಗತನಾದ ಶಂಕರನನ್ನೇ ಬೋಧಿಸುತ್ತವೆ.

ಪರಮಾತ್ಮನಾದ ಶಿವನು ಹೃದಯದಲ್ಲಿಯೂ ಇರುತ್ತಾನೆ. ಆದರೆ ಶಾಸ್ತ್ರಾಚಾರ್ಯೋಪದೇಶಗಳ ಬೆಂಬಲವೂ ಶಮದಮಾದಿಸಾಧನಸಂಪತ್ತುಗಳೂ ಸರ್ವಗತನಾದ ಶಿವನನ್ನು ಕಂಡುಕೊಳ್ಳಲು ಅಗತ್ಯವಾಗಿರುವವು. ಮತ್ತು ಯೋಗಮಾರ್ಗ, ಜ್ಞಾನಮಾರ್ಗಗಳಲ್ಲಿ ನಿಪುಣರೂ ಅನುಭವಿಗಳೂ ಆದ ಗುರುಗಳ ಮಾರ್ಗದರ್ಶನವೂ ಅಗತ್ಯವಾಗಿರುವದು. ಇವೆಲ್ಲವೂ ಒದಗಿದಮೇಲೂ ಸಾಧಕನು ತಾನು ಮನಸ್ಸುಮಾಡದೆ ಹಾಗೂ ಸಾಧನಮಾಡದೆ ಇದ್ದರೆ ಶಿವನನ್ನು ಕಾಣಲಾಗುವದಿಲ್ಲ. ಇಲ್ಲಿ ಸಾಧಕನು ತನಗೆ ಇಂಥ ಸೌಕರ್ಯಗಳಿದ್ದು ಯಾವ ಕ್ರಮದಿಂದ ಶಿವನನ್ನು ನೆನೆಯಬೇಕೆಂಬುದು ತಿಳಿದಿದ್ದರೂ ಹಾಗೆ ಮಾಡಲಿಲ್ಲವಲ್ಲ- ಎಂದು ತನ್ನ ಅಪರಾಧವನ್ನು ಶಿವನಲ್ಲಿ ತೋಡಿಕೊಂಡಿರುತ್ತಾನೆ. ಹಾಗೂ ಕ್ಷಮಿಸುವಂತೆಯೂ ಪ್ರಾರ್ಥಿಸಿರುತ್ತಾನೆ. ಹೇಗೆ ಆಗಲಿ, ಮನುಷ್ಯನು ಶಿವನನ್ನು ಮರೆಯದೆ ಧ್ಯಾನಿಸಬೇಕು. ಅದಕ್ಕಾಗಿ ಯೋಗಮಾರ್ಗ, ಕ್ರಿಯಾಮಾರ್ಗಗಳನ್ನು ಅವಲಂಬಿಸಬೇಕು-ಎಂದಭಿಪ್ರಾಯ.

**ಹೃದ್ಯಂ ವೇದಾಂತವೇದ್ಯಂ ಹೃದಯಸರಸಿಜೇ ದೀಪ್ತಮುದ್ಯತ್ ಪ್ರಕಾಶಂ**
**ಸತ್ಯಂ ಶಾಂತಸ್ವರೂಪಂ ಸಕಲಮುನಿಮನಃಪದ್ಮಷಂಡೈಕವೇದ್ಯಮ್ ।**
**ಜಾಗ್ರತ್ ಸ್ವಪ್ನೇ ಸುಷುಪ್ತೌ ತ್ರಿಗುಣವಿರಹಿತಂ ಶಂಕರಂ ನ ಸ್ಮರಾಮಿ**

ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ
ಶ್ರೀ ಮಹಾದೇವ ಶಂಭೋ ॥೧೧॥

೧೧. "ಶಿವತತ್ತ್ವವು ಹೃದಯಕ್ಕೆ ಮೆಚ್ಚಾಗಿದೆ. ವೇದಾಂತಗಳಿಂದ ತಿಳಿದುಬರುತ್ತಿದೆ. ಹೃದಯಕಮಲದಲ್ಲಿ ಬೆಳಗುತ್ತಿದೆ. ಎದ್ದುಕಾಣುವ ಬೆಳಕಾಗಿದೆ. ಸತ್ಯವೂ ಶಾಂತಸ್ವರೂಪವೂ ಆಗಿದೆ. ಸಮಸ್ತ ಮುನಿಜನರ ಮನಸ್ಸೆಂಬ ಪದ್ಮದ ಮಧ್ಯದಲ್ಲಿ ತಿಳಿದುಬರತಕ್ಕದ್ದಾಗಿದೆ. ಎಚ್ಚರದಲ್ಲಿಯೂ ಕನಸಿನಲ್ಲಿಯೂ ಗಾಢನಿದ್ರೆಯಲ್ಲಿಯೂ ಸಾಕ್ಷಿಯಾಗಿದೆ. ಮೂರು ಗುಣಗಳೂ ಇಲ್ಲದ್ದಾಗಿದೆ. ಇಂಥ ತತ್ತ್ವವಾಗಿರುವ ಶಂಕರನನ್ನು ನಾನು ನೆನೆಯಲಿಲ್ಲ. ಎಲೈ ಶಿವನೆ, ಮಹಾದೇವನೆ, ಶಂಭುವೆ, ನನ್ನ ಅಪರಾಧವನ್ನು ಮನ್ನಿಸುವವನಾಗು " ಎಂದರ್ಥ.

## ವಿವರಣೆ

ಈ ಶ್ಲೋಕದಲ್ಲಿ ಶಿವತತ್ತ್ವವನ್ನು ಕುರಿತು ವರ್ಣಿಸಲಾಗಿದೆ. ಶಿವ, ಶಂಕರ- ಎಂಬ ಹೆಸರುಗಳೇ ಹೃದಯಂಗಮವಾಗಿವೆ. ಎಲ್ಲರನ್ನೂ ವಶಗೊಳಿಸಿಕೊಳ್ಳುತ್ತವೆ. ಹೀಗಿರುವಲ್ಲಿ ಆ ತತ್ತ್ವವನ್ನೇ ಜ್ಞಾನದಿಂದ ಅನುಭವಿಸಿದವರಿಗೆ ಎಂಥ ಆನಂದವಾಗಿರಬೇಡ? ಹೀಗೆ ಹೃದ್ಯವಾಗಿರುವ ಅದು **ವೇದಾಂತವೇದ್ಯವಾಗಿದೆ.** ವೇದಗಳ ಕೊನೆಯ ಭಾಗವಾದ ಹಾಗೂ ಸಿದ್ಧಾಂತರೂಪವಾದ ಉಪನಿಷತ್ತುಗಳಲ್ಲಿ ತಿಳಿದುಬರುತ್ತಿದೆ. ಅದನ್ನು ಅರಿಯಬೇಕೆನ್ನುವವರು ಉಪನಿಷತ್ತುಗಳನ್ನೇ ವಿಚಾರಮಾಡಬೇಕು. ಇನ್ನು ಅದು ಹೃದಯಕಮಲದಲ್ಲಿ ಬೆಳಗುತ್ತಿದೆ ಅದು ಸರ್ವವ್ಯಾಪಕವಾಗಿದ್ದರೂ ಅದನ್ನು ಕಂಡುಕೊಳ್ಳಬೇಕಾದ ಸ್ಥಳವು ಹೃದಯವೆಂದರ್ಥ. ಎಲ್ಲೆಲ್ಲಿಯೂ ಇರುವ ಗಾಳಿಯನ್ನೇ ಬೀಸಣಿಗೆಯ ಮೂಲಕ ಕಂಡುಕೊಳ್ಳುವಂತೆ ಆತ್ಮತತ್ತ್ವವನ್ನು ಹೃದಯದಲ್ಲಿ ಕಂಡುಕೊಳ್ಳಬೇಕಾಗಿದೆ. ಅಲ್ಲಿ ಅದು ವಿರಾಜಮಾನವಾಗಿದೆ. ಉಪನಿಷತ್ತಿನಲ್ಲಿ ಹೃದಯಶಬ್ದವನ್ನು ವಿವರಿಸುವಾಗ ಹೀಗೆಂದು ಹೇಳಿದೆ. " ಹೃದಿ ಅಯಮ್; ಹೃದಯಮ್; " ಎಂದರೆ ಅಯಮ್-ಈ ಆತ್ಮನು, ಹೃದಿ-ಹೃದ್ ಎಂಬಲ್ಲಿದ್ದಾನೆ. ಆದ್ದರಿಂದ ಅವನಿರುವ ಜಾಗವನ್ನು ಹೃದಯವೆಂದಿದೆ -ಎಂದರ್ಥ. ಹೀಗೆ ಹೃದಯದಲ್ಲಿ ಬೆಳಗುತ್ತಿರುವ ಅದು ಉನ್ನತವಾದ- ಅತಿ ಹೆಚ್ಚಿನ ಪ್ರಕಾಶರೂಪವಾಗಿದೆ. ಆ ಪ್ರಕಾಶವನ್ನು ಅನುಸರಿಸಿಯೇ ಸೂರ್ಯಚಂದ್ರಾದಿಗಳೂ ಬೆಳಗುತ್ತಾರೆ. ಮತ್ತು ಸೂರ್ಯಾದಿಗಳ ಕಾಂತಿಯೆಲ್ಲವೂ ಅದರದೇ ಅಂಶವಾಗಿದೆ. ಇಂಥ ಪ್ರಕಾಶರೂಪವಾದ ಅದು ಸತ್ಯವೂ ಆಗಿದೆ. ಸತ್ಯವೆಂದರೆ ಯಾವಾಗಲೂ ಇರುವಂತೆಯೇ ಇದ್ದುಕೊಂಡಿದ್ದು ತನ್ನ ಸ್ವರೂಪವನ್ನು ಬದಲಾಯಿಸದೆ ಇರುವದು-ಎಂದರ್ಥ. ಮತ್ತು ಶಾಂತಸ್ವರೂಪವೂ ಆಗಿದೆ. ಶಾಂತವೆಂದರೆ ಅಲೆಗಳೇ ಏಳದಿರುವ ಗಂಭೀರವಾದ ಸಮುದ್ರದಂತೆ ಯಾವಾಗಲೂ ವಿಕಾರವಾಗದೆ ಆಳ್ಳಾಡದೆ ಉದ್ವಿಗ್ನವಾಗದೆ ಇರುವದು-ಎಂದಭಿಪ್ರಾಯ. ಇನ್ನು ಆ ತತ್ತ್ವವನ್ನು ಯಾವಾಗಲೂ

ಮನನಮಾಡುವವರೇ ಮುನಿಗಳೆನಿಸಿರುವರು. ಅಂಥ ಮುನಿಗಳು ತಮ್ಮ ಹೃದಯದಲ್ಲಿ ಅದನ್ನು ಅನುಸಂಧಾನಮಾಡುತ್ತಿರುವರು. ಅದು ಅವರಿಗೆ ಅಲ್ಲಿಯೇ ತಿಳಿದುಬರುವದು.

ಈಗ ಮತ್ತೊಂದು ರೀತಿಯಿಂದ ಆ ತತ್ತ್ವವನ್ನು ಅನುಭವಗಮ್ಯವಾಗಿ ತಿಳಿಸುತ್ತಾರೆ. ಹೇಗೆಂದರೆ ಅದು ಅವಸ್ಥಾತ್ರಯಸಾಕ್ಷಿಯಾಗಿರುವದು. ಇದು ವೇದಾಂತಶಾಸ್ತ್ರಗಳಲ್ಲಿ ಒಂದು ಮುಖ್ಯವಾದ ಪ್ರಕ್ರಿಯೆಯಾಗಿರುತ್ತದೆ. ಎಚ್ಚರ ಕನಸು, ನಿದ್ರೆ -ಎಂಬೀ ಅವಸ್ಥೆಗಳನ್ನು ಅವಸ್ಥಾತ್ರಯವೆನ್ನುವರು. ಮಾನವನ ಉಳಿದ ಎಲ್ಲಾ ರೀತಿಯಾದ ಅನುಭವಗಳೂ ಈ ಮೂರರಲ್ಲೇ ಅಡಕವಾಗಿರುತ್ತವೆ. ಇವುಗಳನ್ನು ಪರೀಕ್ಷಿಸುವ ಮೂಲಕ ಆತ್ಮತತ್ತ್ವನಿರ್ಧಾರಣೆಯನ್ನು ಮಾಡಬಹುದಾಗಿದೆ. ಎಚ್ಚರದಲ್ಲಿ ನಮ್ಮ ದೇಹಾದಿಗಳೂ ನಮ್ಮ ಇಂದ್ರಿಯಗಳಿಗೆ ಗೋಚರವಾಗುತ್ತಿರುವ ಭೌತಿಕಪ್ರಪಂಚವೂ ಇದ್ದು ಕೊಂಡಿರುವದು. ಮನಸ್ಸಿನೊಳಗೆ ಆಯಾ ವಸ್ತುಗಳನ್ನು ಗ್ರಹಿಸುವ ಪ್ರತ್ಯಯಗಳೂ ಹೊರಗಡೆ ಆಯಾ ದ್ರವ್ಯಗಳೂ ಇರುವವು. ಇದೆಲ್ಲ ನಿಜವೆಂದೇ ನಾವು ನಂಬಿರುವೆವು. ಆದರೆ ನಾವು ಕನಸನ್ನು ಪ್ರವೇಶಿಸುವ ವೇಳೆಗೆ ಈ ಸ್ಥೂಲಪ್ರಪಂಚವೂ ಒಳಗಿನ ಅಧ್ಯಾತ್ಮಪ್ರಪಂಚವೂ ಮರೆಯಾಗಿಬಿಡುವವು, ಕನಸಿನಲ್ಲಿ ಎಚ್ಚರದಂತೆಯೇ ಇರುವ ಮತ್ತೊಂದು ಪ್ರಪಂಚವು ತೋರಿಕೊಳ್ಳುವದು. ಆದರೆ ಅದು ಮೊದಲು ನಾವು ಕಾಣುತ್ತಿದ್ದ ಜಾಗ್ರತ್‌ಪ್ರಪಂಚವಲ್ಲವೆಂಬುದು ನಿಶ್ಚಯವು. ಏಕೆಂದರೆ ಅಲ್ಲಿ ಊಟಮಾಡಿ ತೃಪ್ತಿಯಾಗಿದ್ದರೂ ಇಲ್ಲಿ ಹಸಿವಾಗಿರುವದು. ಆದ್ದರಿಂದ ಈ ಪ್ರಪಂಚವೇ ಬೇರೆಯಾಗಿದ್ದು ಕನಸು ಪೂರೈಸುತ್ತಲೂ ಇದು ಕೂಡ ಮರೆಯಾಗುವದು. ಇವೆರಡೂ ಒಂದೇ ಕಾಲದಲ್ಲಿ ತೋರುವದಿಲ್ಲವಾದರೂ ಒಬ್ಬನೇ ಆತ್ಮನಿಗೆ ದೃಶ್ಯವಾಗಿರುವವು. ಇವುಗಳ ದ್ರಷ್ಟನಾದ ಆತ್ಮನು ಬದಲಾಯಿಸಿರುವದಿಲ್ಲ. ಅವನು ಈ ಅವಸ್ಥೆಗಳ ಸಾಕ್ಷಿಯಾಗಿದ್ದು ಇವು ಬಂದದ್ದನ್ನೂ ಮರೆಯಾದದ್ದನ್ನೂ ಅರಿಯುವವನು ಅಥವಾ ಬೆಳಗುತ್ತಿರುವನು. ಇನ್ನು ಗಾಢನಿದ್ರೆಯಲ್ಲಿ ಈ ದ್ವೈತಪ್ರಪಂಚದ ಹಂಗೇಇಲ್ಲದೆ ಇದ್ದುಕೊಂಡಿರುವನು. ಹೀಗೆ ಅವಸ್ಥೆಗಳನ್ನೆಲ್ಲ ಬೆಳಗುತ್ತಿದ್ದರೂ ಅವನು ಅವುಗಳ ಸಂಪರ್ಕವಿಲ್ಲದವನಾಗಿರುವನು. ಗುಣಾತೀತನಾಗಿರುವನು. ಅವನೇ ಶಿವನು, ಮೇಲೆ ತಿಳಿಸಿದ ವಿಶೇಷಗಳುಳ್ಳ ಆತ್ಮನು. ಇಂಥ ಆತ್ಮನೇ ತಾನಾಗಿದ್ದರೂ ಮರೆತು ಅಪರಾಧಿಯಾಗಿದ್ದೇನೆ. ನನ್ನನ್ನು ಕ್ಷಮಿಸು-ಎಂದು ಸಾಧಕನು ಬೇಡಿಕೊಳ್ಳುತ್ತಿದ್ದಾನೆ.

**ಚಂದ್ರೋದ್ಭಾಸಿತಶೇಖರೇ ಸ್ಮರಹರೇ ಗಂಗಾಧರೇ ಶಂಕರೇ**
**ಸರ್ಪೈರ್ಭೂಷಿತಕಂಠಕರ್ಣವಿವರೇ ನೇತ್ರೋತ್ಥವೈಶ್ವಾನರೇ ।**
**ದಂತಿತ್ವಕ್ಕೃತಸುಂದರಾಂಬರಧರೇ ತ್ರೈಲೋಕ್ಯಸಾರೇ ಹರೇ**
**ಮೋಕ್ಷಾರ್ಥಂ ಕುರು ಚಿತ್ತವೃತ್ತಿಮಮಲಾಂ ಅನ್ಯೈಸ್ತು**
**ಕಿಂ ಕರ್ಮಭಿಃ ॥೧೨॥**

೧೨. "ಎಲೈ ಮನಸ್ಸೆ, ಚಂದ್ರನಿಂದ ವಿರಾಜಮಾನವಾದ ಜಟಾಜೂಟವುಳ್ಳವನಾದ, ಮನ್ಮಥನನ್ನು ಸಂಹಾರಮಾಡಿದ, ಗಂಗೆಯನ್ನು ಶಿರಸ್ಸಿನಲ್ಲಿ ಧರಿಸಿರುವ, ಸುಖಪ್ರದನಾದ, ಕುತ್ತಿಗೆಯಲ್ಲಿಯೂ ಕಿವಿಗಳಲ್ಲಿಯೂ ಸರ್ಪಗಳಿಂದ ಅಲಂಕೃತನಾದ, ಹಣೆಗಣ್ಣಿನಿಂದ ಅಗ್ನಿಯನ್ನುಂಟುಮಾಡುವವನಾದ, ಆನೆಯ ಚರ್ಮದಿಂದ ಸಿದ್ಧಗೊಳಿಸಿದ ಸುಂದರವಾದ ಉಡುಪನ್ನು ಧರಿಸಿರುವ, ತ್ರೈಲೋಕ್ಯಗಳ ಸಾರನಾದ ಹರನಲ್ಲಿಯೇ ನೀನು ಮುಕ್ತಿಯ ಪ್ರಾಪ್ತಿಗಾಗಿ ಪವಿತ್ರವಾದ ವೃತ್ತಿಯನ್ನು ಮಾಡು. ಉಳಿದ ಕರ್ಮಗಳಿಂದಾಗಬೇಕಾದದ್ದೇನು?" ಎಂದು ಅಭಿಪ್ರಾಯ.

## ವಿವರಣೆ

ಇಲ್ಲಿಂದ ಮುಂದಿನ ನಾಲ್ಕು ಶ್ಲೋಕಗಳು ಪೂರ "ಕ್ಷಂತವ್ಯೋ ಮ್ಯೇಽಪರಾಧಃ" ಎಂಬ ಪಲ್ಲವಿಯನ್ನು ಹೊಂದಿರುವದಿಲ್ಲ. ಇದುವರೆಗಿನ ಹಿಂದಿನ ಹನ್ನೊಂದು ಪದ್ಯಗಳಲ್ಲಿ ಮಾತ್ರ ಅದು ಅನುಸ್ಯೂತವಾಗಿತ್ತು. ಆದ್ದರಿಂದ ಈ ಪದ್ಯಗಳು ಇದೇ ಸ್ತೋತ್ರಕ್ಕೆ ಸೇರಿದವುಗಳೊ, ಅಲ್ಲವೊ-ತಿಳಿಯುವಂತಿಲ್ಲ. ಆದರೂ ಅರ್ಥದೃಷ್ಟಿಯಿಂದ ಸಾಮ್ಯವಿದೆ. ಈಶ್ವರಶರಣಾಗತಿಯೂ ಇದೆ. ಪ್ರಾರ್ಥನೆಯೂ ಇದೆ. ಆದ್ದರಿಂದ ಈ ನಾಲ್ಕು ಪದ್ಯಗಳನ್ನೂ ಶ್ರೀರಂಗಂ ವಾಣೀ ವಿಲಾಸ ಪ್ರಕಾಶನದವರು ಈ ಸ್ತೋತ್ರಕ್ಕೆ ಅಳವಡಿಸಿರುತ್ತಾರೆ. ಅಲ್ಲಿಗೆ ಹದಿನೈದು ಪದ್ಯಗಳಾಗುತ್ತವೆ. ಈಗ ಇವುಗಳ ಅರ್ಥವನ್ನೂ ವಿಚಾರಮಾಡೋಣ.

ಈ ಪದ್ಯದಲ್ಲಿ ಸಾಧಕನು ತನ್ನ ಮನಸ್ಸಿಗೆ ಬುದ್ಧಿವಾದವನ್ನು ಹೇಳುತ್ತಿದಾನೆ. ಮತ್ತು ಪರಮೇಶ್ವರನನ್ನು ನಾನಾ ವಿಶೇಷಣಗಳಿಂದ ಹೊಗಳುತ್ತಿದಾನೆ.

ಎಲೈ ಮನಸ್ಸೆ, ನೀನು ಇನ್ನು ಯಾವ ಚಿಂತೆಯನ್ನೂ ಮಾಡಲೇಬೇಡ. ಮೋಕ್ಷವೊಂದನ್ನು ಬಿಟ್ಟು ಮತ್ತೇನನ್ನೂ ಬಯಸಬೇಡ. ಅನಾತ್ಮವಾದ ವಸ್ತುಗಳ ಆಕಾರವಾದ ವೃತ್ತಿಯನ್ನೇ ಎಬ್ಬಿಸಿಕೊಳ್ಳಲೇಬೇಡ. ಎಲ್ಲಾ ನಿನ್ನ ವ್ಯಾಪಾರಗಳನ್ನೂ ಹರನೆನಿಸಿದ ಭಗವಂತನಲ್ಲಿ ಕೇಂದ್ರೀಕರಿಸು. ಉಳಿದ ಕರ್ಮಗಳಿಂದ ನಿನಗೇನಾಗಬೇಕಾಗಿದೆ? ನೀನು ಅಪವಿತ್ರವಾದ ಸಂಕಲ್ಪಗಳನ್ನು ಮಾಡಬೇಡ. ಶಂಕರನನ್ನೇ ಯಾವಾಗಲೂ ಚಿಂತಿಸು. ಮೋಕ್ಷವನ್ನೇ ಬಯಸುವವನಾಗು. ಆ ಶಿವನು ಎಂಥವನು? ಎಂಥೆಂಥ ಗುಣಕರ್ಮಲೀಲೆಗಳುಳ್ಳವನು? ಎಂಬಿದನ್ನು ಅನುಸಂಧಾನಮಾಡು -ಎಂದು ತಿಳಿಸುತ್ತಾ ಇದ್ದಾನೆ.

ಈಗ ಶ್ಲೋಕದಲ್ಲಿರುವ ಶಿವನ ವಿಶೇಷಣಗಳ ಅರ್ಥವನ್ನು ವಿಚಾರ ಮಾಡೋಣ. ಭಗವಂತನು ಚಂದ್ರನನ್ನು ತನ್ನ ಜಟಾಕಿರೀಟದಲ್ಲಿ ಅಲಂಕಾರವಾಗಿ ಧರಿಸಿದ್ದಾನೆ. ಆದ್ದರಿಂದ ಶಿವನನ್ನು ಚಂದ್ರಮೌಳಿಯೆಂದೂ ಚಂದ್ರಶೇಖರನೆಂದೂ

ಕರೆಯುತ್ತಾರೆ. ಒಮ್ಮೆ ಶರಣಾಗತನಾದ ಚಂದ್ರನಿಗೆ ಶಿವನು ಆಶ್ರಯವನ್ನು ನೀಡಿ ಅವನಿಗೆ ತನ್ನ ತಲೆಯಮೇಲೆ ಸ್ಥಾನವನ್ನು ಕೊಟ್ಟನು. ಆದ್ದರಿಂದ ಭಗವಂತನು ಭಕ್ತರಕ್ಷಕನೆಂದು ತಿಳಿದುಬರುವದು. ಹಾಗೇಯೇ ಗಂಗೆಯನ್ನೂ ಭಗೀರಥನ ಪ್ರಾರ್ಥನಾನುಸಾರವಾಗಿ ಜಟೆಯಲ್ಲಿ ಬಂಧಿಸಿ ಗಂಗಾಧರನೆನಿಸಿರುತ್ತಾನೆ. ಮನ್ಮಥನನ್ನು ಸುಟ್ಟು ಬೂದಿಮಾಡಿ ಸ್ಮರಹರನೆನಿಸಿದ್ದಾನೆ. ಲೋಕಕ್ಕೆಲ್ಲ ಸುಖವನ್ನುಂಟು ಮಾಡುವವನಾಗಿ ಶಂಕರನೆನಿಸಿರುತ್ತಾನೆ. ಮತ್ತು ಹಾವುಗಳನ್ನು ಕೊರಳಿಗೂ ಕಿವಿಗಳಿಗೂ ಸುತ್ತಿಕೊಂಡು ನಾಗಾಭರಣನೆನಿಸಿದ್ದಾನೆ. ತನ್ನ ಮೂರನೆಯ ಕಣ್ಣಿನಿಂದ ಅಗ್ನಿಯನ್ನು ಹೊರಗೆಡವಿರುತ್ತಾನೆ. ಇನ್ನು ಗಜಾಸುರನೆಂಬ ರಾಕ್ಷಸನನ್ನು ಸಂಹಾರಮಾಡಿ ಆತನ ಪ್ರಾರ್ಥನೆಯಂತೆ ಗಜಚರ್ಮವನ್ನು ತನ್ನ ವಸ್ತ್ರವಾಗಿ ಧರಿಸಿ "ಕೃತ್ತಿವಾಸ" ನೆನಿಸಿರುತ್ತಾನೆ. ಇದೊಂದು ಭೂಷಣವಾಗಿಯೇ ಇದೆ. ಇಂಥ ಪರಮೇಶ್ವರನು ಮೂರು ಲೋಕಗಳ ಸಾರವಾಗಿರುತ್ತಾನೆ. ಪಾಪಹರನೆನಿಸಿರುತ್ತಾನೆ. ಇವನಲ್ಲಿಯೇ ತನ್ನ ಚಿತ್ತವು ನೆಲಸ ಬೇಕೆಂದು ಭಕ್ತನು ಪ್ರಾರ್ಥಿಸಿದ್ದಾನೆ.

ಈ ಸಂದರ್ಭದಲ್ಲಿ ಪರಮೇಶ್ವರನ ಹೆಚ್ಚುಗಾರಿಕೆಯನ್ನು ತಿಳಿಸುವ ಮತ್ತೊಂದು ಶ್ಲೋಕವು ಕಂಡುಬಂದಿತು. ಅದು ಹೀಗಿದೆ :-

**ಭೀತಿರ್ನಾಸ್ತಿ ಭುಜಂಗಪುಂಗವವಿಷಾತ್ ಪ್ರೀತಿರ್ನ ಚಂದ್ರಾಮೃತಾತ್**
**ನಾಶೌಚಂ ಚ ಕಪಾಲದಾಮಲುಲನಾತ್ ಶೌಚಂ ನ ಗಂಗಾಜಲಾತ್।**
**ನೋದ್ವೇಗಶ್ಚಿತಿಭಸ್ಮನಾ ನ ಚ ಸುಖಂ ಗೌರೀಸ್ತನಾಲಿಂಗನಾತ್**
**ಆತ್ಮಾರಾಮತಯಾ ಹಿತಾಹಿತಸಮಃ ಸ್ವಸ್ಥೋ ಹರಃ ಪಾತು ವಃ॥**

ಶಿವನಿಗೆ ವಿಷದ ಹಾವುಗಳನ್ನು ದೇಹದಲ್ಲಿ ಅಲಂಕರಿಸಿಕೊಂಡದ್ದರಿಂದ ಯಾವ ಭಯವೂ ಇಲ್ಲ. ಹಾಗೆಯೇ ಚಂದ್ರನನ್ನು ಧರಿಸಿದ್ದರಿಂದ ಆತನ ಶೀತಲ ಕಿರಣಾಮೃತಗಳಿಂದ ಸಂತೋಷವೂ ಇಲ್ಲ. ಕಪಾಲಗಳ ಮಾಲೆಯನ್ನು ಹಾಕಿ ಕೊಂಡದ್ದರಿಂದ ಮೈಲಿಗೆಯಿಲ್ಲ. ಗಂಗಾಜಲವನ್ನು ಶಿರದಲ್ಲಿ ಹೊತ್ತಿದ್ದರಿಂದ ಮಡಿಯೂ ಇಲ್ಲ. ಇನ್ನು ಚಿತೆಯ ಬೂದಿಯನ್ನು ಬಳಿದುಕೊಂಡದ್ದರಿಂದ ಉದ್ವೇಗವಿಲ್ಲ- ಎಂದರೆ ಮನಸ್ಸಿನಲ್ಲಿ ತಳಮಳವಿಲ್ಲ. ಗೌರಿಯನ್ನು ಆಲಿಂಗನಮಾಡಿಕೊಂಡದ್ದರಿಂದ ಸುಖವೂ ಇಲ್ಲ. ಹೀಗೆ ಹಿತಾಹಿತಗಳಲ್ಲಿ ಸಮನಾಗಿ ಆತ್ಮಾರಾಮನಾಗಿ ಸ್ವಸ್ಥನಾಗಿರುವ ಶ್ರೀ ಹರನು (ಮಹಾದೇವನು) ನಿಮ್ಮನ್ನು ಕಾಪಾಡಲಿ! ಎಂದಭಿಪ್ರಾಯ.

**ಕಿಂ ಯಾನೇನ ಧನೇನ ವಾಜಿಕರಿಭಿಃ ಪ್ರಾಪ್ತೇನ ರಾಜ್ಯೇನ ಕಿಂ**
**ಕಿಂ ವಾ ಪುತ್ರಕಲತ್ರಮಿತ್ರಪಶುಭಿಃ ದೇಹೇನ ಗೇಹೇನ ಕಿಮ್ ।**
**ಜ್ಞಾತ್ವೈತತ್ ಕ್ಷಣಭಂಗುರಂ ಸಪದಿ ರೇ ತ್ಯಾಜ್ಯಂ ಮನೋ ದೂರತಃ**
**ಸ್ವಾತ್ಮಾರ್ಥಂ ಗುರುವಾಕ್ಯತೋ ಭಜ ಭಜ**
**ಶ್ರೀ ಪಾರ್ವತೀವಲ್ಲಭಮ್ ॥೧೩॥**

೧೩. "ಎಲೈ ಮನಸ್ಸೆ, ವಾಹನಗಳಿಂದೇನು? ಹಣದಿಂದೇನು? ಕುದುರೆ ಆನೆಗಳಿಂದೇನು? ರಾಜ್ಯವನ್ನೇ ಸಂಪಾದಿಸಿ ಆಗಬೇಕಾದದ್ದೇನು? ಹಾಗೆಯೇ ಮಗ, ಹೆಂಡತಿ, ಸ್ನೇಹಿತ, ದನಕರುಗಳಿಂದೇನು? ಈ ಶರೀರದಿಂದಾದರೂ ಮನೆಯಿಂದಾದರೂ ಆಗಬೇಕಾದದ್ದೇನು? ಇವೆಲ್ಲವೂ ಕ್ಷಣಕಾಲ ತೋರಿ ಕಣ್ಮರೆ ಆಗತಕ್ಕವುಗಳು. ಆದ್ದರಿಂದ ಇವುಗಳಿಂದ ನೀನು ದೂರನಾಗಿದ್ದು ಇವುಗಳನ್ನು ತ್ಯಜಿಸುವವನಾಗು. ಇನ್ನು ನಿನ್ನ ಆತ್ಮೋದ್ಧಾರಕ್ಕಾಗಿ ಗುರೂಪದೇಶದಂತೆ ಪಾರ್ವತೀವಲ್ಲಭನಾದ ಶ್ರೀ ಮಹಾದೇವನನ್ನು ಭಜಿಸುವವನಾಗು" -ಎಂದರ್ಥ.

## ವಿವರಣೆ

ಈ ಶ್ಲೋಕದಲ್ಲಿ ನಿತ್ಯಾನಿತ್ಯವಿವೇಕವನ್ನೂ ವೈರಾಗ್ಯವನ್ನೂ ತಿಳಿಸಲಾಗಿದೆ. ಶ್ರೀ ಪಾರ್ವತೀವಲ್ಲಭನೊಬ್ಬನೇ ನಿತ್ಯನು, ಶಾಶ್ವತನು, ಶಿವನೂ ಆಗಿರುವನು. ಉಳಿದ ಪ್ರಪಂಚವೂ ಅದರಲ್ಲಿರುವ ಭೋಗ್ಯವಸ್ತುಗಳೂ ಅನಿತ್ಯವಾದವುಗಳು. ಆದ್ದರಿಂದ ಶಿವನೊಬ್ಬನನ್ನೇ ಭಜಿಸುವದೇ ಶ್ರೇಯಸ್ಕರವು- ಎಂದಭಿಪ್ರಾಯ. ಇಹಲೋಕದ ಭೋಗಸಾಮಗ್ರಿಗಳು ತತ್ಕಾಲಕ್ಕೆ ಸುಖವನ್ನುಂಟುಮಾಡುವವೆಂದು ಒಪ್ಪಿದರೂ ಕಾಲಾಂತರದಲ್ಲಿ ಅವು ಇಲ್ಲವಾಗಿಬಿಡುವವು. ಆಗ ದುಃಖವೇ ಆಗುವದು. 'ಸಂಯೋಗವು ವಿಪ್ರಯೋಗದಲ್ಲಿ ಕೊನೆಗಾಣುತ್ತದೆ' ಎಂಬ ನ್ಯಾಯವಿದೆ. ಸಂಯೋಗವೆಂದರೆ ಬಂದು ಸೇರುವದು. ಜಗತ್ತಿನಲ್ಲಿರುವ್ವ ವಸ್ತುಗಳಲ್ಲಿ ಕೆಲವು ನಮ್ಮ ಕರ್ಮಫಲವಾಗಿ ಬಂದು ಸೇರಿರುತ್ತವೆ. ಇದನ್ನು ಋಣಾನುಬಂಧವೆನ್ನುವರು. ಈ ಕಾರಣದಿಂದ ಹೊಸದಾಗಿ ಆಗಾಗ್ಗೆ ಬಂದು ಸೇರುವ ಪದಾರ್ಥಗಳ ಗುಂಪಿನಲ್ಲೇ ದೇಹಾದಿಗಳೂ, ಹೆಂಡತಿ, ಮಕ್ಕಳು, ಹಣಕಾಸು-ಮುಂತಾದವೂ ಅಡಕವಾಗಿವೆ. ಆದ್ದರಿಂದ ಅವು ಒಂದಲ್ಲ, ಒಂದು ದಿನ ನಮ್ಮನ್ನು ಬಿಟ್ಟು ಹೋಗುವದು ನಿಶ್ಚಯುವಾಗಿರುತ್ತದೆ. ಹಾಗೆ ಅವು ಅಗಲಿಹೋದಾಗ ನಮುಗೆ ದುಃಖವನ್ನುಂಟುಮಾಡುತ್ತವೆ. ಅದರ ಬದಲು ನಾವೇ ನಮ್ಮ ಸ್ವಇಚ್ಛೆಯಿಂದ ತ್ಯಾಗಮಾಡಿದರೆ ಸುಖವನ್ನುಂಟುಮಾಡುತ್ತವೆ. ಹೀಗಿರುವದರಿಂದ ಪರಮೇಶ್ವರನ ಸಲುವಾಗಿ ಐಹಿಕಭೋಗಗಳನ್ನೂ ಭೋಗಸಾಮಗ್ರಿಗಳನ್ನೂ ಬಿಡುವದು ಶ್ರೇಯಸ್ಕರವಾಗಿದೆ. ಈ ರೀತಿಯಾದ ವಿವೇಕವು ಮಾತ್ರ ಮನುಷ್ಯನಲ್ಲಿ ಉದಯಿಸಬೇಕಾಗಿದೆ. ಅದಕ್ಕಾಗಿ ಈ ಪದ್ಯದಲ್ಲಿ " ಕಿಮ್ " ಎಂದು ಕೆಲವು ಬಾರಿ ಪ್ರಶ್ನಿಸಲಾಗಿದೆ.

"ಯಾನ" ವೆಂದರೆ ವಾಹನ-ಎಂದರ್ಥ. ಯಾರಾದರೂ ಕಾರಿನಲ್ಲಿ ಓಡಾಡುವವರನ್ನು ನೋಡಿದರೆ ನಮಗೂ ಅದು ಬೇಕೆನಿಸುತ್ತದೆ. ಆದರೆ ಅದನ್ನು ಸಾಕುವವರಿಗೇ ಅದರ ಕಷ್ಟನಷ್ಟಗಳೂ ಅದರ ಮೂಲಕ ಒದಗಬಹುದಾದ ತಂಟೆ ತಾಪತ್ರಯಗಳೂ ಗೊತ್ತಿರುತ್ತವೆ. ಅದು ಕೆಟ್ಟುಹೋದಾಗ, ಕಳುವಾದಾಗ,

ಅಪಘಾತವಾದಾಗ ಎಂಥ ದುಃಖವಾಗುವದು? ಹಾಗೇನೂ ಆಗದೆ ಇರುವಾಗಲೂ ಅದರ ಖರ್ಚುವೆಚ್ಚಗಳು ಎಷ್ಟು? ಮನೆಯಲ್ಲಿರುವ ದೇವರ ಸಾಲಿಗ್ರಾಮವನ್ನು ತೊಳೆಯಲು ಒಂದು ಚೊಂಬು ನೀರೇ ಸಾಕು. ಆದರೆ ವಾಹನವನ್ನು ತೊಳೆಯಲು ಕೊಡಗಟ್ಟಲೆ ನೀರು ಬೇಕಾಗುವದು. ಅದಕ್ಕೆ ಇಂಧನವು ಬೇಕು. ಹೀಗೆ ಅನೇಕ ರೀತಿಯ ಖರ್ಚುವೆಚ್ಚಗಳಿರುವವು. ಇದಕ್ಕಿಂತ ವಾಹನವಿಲ್ಲದಿರುವದೇ ಸುಖವಲ್ಲವೆ? ಎಂದು ಕೇಳಲಾಗಿದೆ. ಇದರಂತೆಯೇ ಹಣ. ಇದು ಕೂಡ ಈಗಿನ ಕಾಲದಲ್ಲಿ ಅಪಾಯಕರವಾಗಿರುತ್ತದೆ. ಇದಕ್ಕೆ ಕಳ್ಳರು, ಸರ್ಕಾರದವರು, ಯಾಚಕರು, ರಾಜಕೀಯವ್ಯಕ್ತಿಗಳೇ ಮುಂತಾದ ನೂರಾರು ಜನರು ಶತ್ರುಗಳಿದ್ದಾರೆ. ಆದ್ದರಿಂದ ಇದರಿಂದೇನು? ಎಂದು ವಿವೇಕಿಗೆ ಅನಿಸುವದು. ಹಾಗೆಯೇ ಆನೆ ಕುದುರೆಗಳು, ಅಧಿಕಾರ-ಇವೆಲ್ಲವೂ ಕಾಪಾಡಿಕೊಳ್ಳಲು ಆಯಾಸಕರವಾದವುಗಳಾಗಿರುವವು. ಅವುಗಳನ್ನು ಸಂಪಾದಿಸಿಕೊಳ್ಳುವ ಕಾಲಕ್ಕೂ ಬಹಳ ಶ್ರಮವಾಗುವದು.

ಹಾಗೆಯೇ ಕುಟುಂಬದಲ್ಲಿಯೂ ಸಾಕಷ್ಟು ದುಃಖವಿರುವದು. ಮಗ, ಹೆಂಡತಿ, ಬಂಧುಗಳೇ ಮುಂತಾದವರು ಕೆಲವು ವೇಳೆ ಪ್ರತಿಕೂಲವಾಗಿ ವರ್ತಿಸುವರು. ಅತ್ತೆಸೊಸೆಯರಿಗೂ ಕೆಲವು ವೇಳೆ ಗಂಡಹೆಂಡರಿಗೂ ತಾಯಿಮಕ್ಕಳಿಗೂ ಕೂಡ ವಿರೋಧವಾಗುವದು. ಆಗ ಸಂಸಾರವೇ ಬೇಸರವೆನಿಸುವದು. ಸಾಲದ್ದಕ್ಕೆ ವ್ಯವಹಾರದಲ್ಲಿಯೂ ಅನೇಕ ಕಾರಣಗಳಿಂದ ಮಿತ್ರರು ಶತ್ರುಗಳಾಗುವರು. ಶರೀರಕ್ಕೂ ರೋಗರುಜಿನಾದಿಗಳೂ ಮನಸ್ಸಿಗೆ ಭಯ, ಅಸೂಯೆ, ಕಾಮಕ್ರೋಧಾದಿಗಳು ಉಂಟಾಗಿ ಕಾಡುವವು. ಆಗ ಬದುಕೇ ಬೇಡವೆನಿಸಬಹುದು. ಇವುಗಳನ್ನೇ ಕಿಮ್ -ಅದರಿಂದೇನಾಯ್ತು? ಎಂದು ಕೇಳಲಾಗಿದೆ. ಸಂಸಾರವು ಯಾವನೊಬ್ಬನಿಗೂ ಕೇವಲ ಸುಖವನ್ನು ನೀಡಿರುವದಿಲ್ಲ. ಸುಖದೊಡನೆ ಸಂಕಟಗಳನ್ನೂ ಸಮಸ್ಯೆಗಳನ್ನೂ ಒಡ್ಡಿರುತ್ತದೆ. ಒಂದು ವೇಳೆ ಎಲ್ಲವೂ ಚೆನ್ನಾಗಿದ್ದು ಎಲ್ಲವೂ ಸುಖಕರವಾಗಿದ್ದರೆ ಅದು ಬೇಗನೆ ಇಲ್ಲವಾಗುತ್ತದೆ. ಕಣ್ಮರೆಯಾಗಿಬಿಡುತ್ತದೆ. ನೀರಿನ ಮೇಲಿನ ಗುಳ್ಳೆಯಂತೆ ಅತ್ಯಂತ ಚಂಚಲವಾಗಿರುತ್ತದೆ. ಆದ್ದರಿಂದ ಎಲೈ ಮನಸ್ಸೆ, ನೀನು ಈ ಅನಾತ್ಮಗಳ ವ್ಯಾಮೋಹವನ್ನು ಬಿಡು. ಅವುಗಳನ್ನು ದೂರವಾಗಿರಿಸಿಬಿಡು. ನಿನ್ನ ಕಲ್ಯಾಣಕ್ಕಾಗಿ ಶ್ರೀ ಪಾರ್ವತೀಪತಿಯನ್ನು ಭಜಿಸುವವನಾಗು. ಗುರುವು ತಿಳಿಸಿಕೊಟ್ಟ ಮಾತಿನಂತೆ ಸನ್ಮಾರ್ಗಾವಲಂಬಿಯಾಗು. ಅವನ ಉಪದೇಶವನ್ನು ಅನುಸರಿಸು-ಹೀಗೆಂದು ಸಾಧಕನು ತನ್ನ ಚಿತ್ತಕ್ಕೆ ವಿವೇಕವನ್ನೂ ವೈರಾಗ್ಯವನ್ನೂ ಉಪದೇಶಿಸುತ್ತಿದ್ದಾನೆ.

**ಪೌರೋಹಿತ್ಯಂ ರಜನಿಚರಿತಂ ಗ್ರಾಮಣೀತ್ವಂ ನಿಯೋಗಃ**
**ಮಾಠಾಪತ್ಯಂ ಹ್ಯನೃತವಚನಂ ಸಾಕ್ಷಿವಾದಃ ಪರಾನ್ನಮ್ ।**
**ಬ್ರಹ್ಮದ್ವೇಷಃ ಖಲಜನರತಿಃ ಪ್ರಾಣಿನಾಂ ನಿರ್ದಯತ್ವಂ**
**ಮಾ ಭೂದೇವಂ ಮಮ ಪಶುಪತೇ ಜನ್ಮಜನ್ಮಾಂತರೇಷು ॥೧೪॥**

೧೪. "ಪೌರೋಹಿತ್ಯ, ರಾತ್ರಿಯ ಸಂಚಾರ, ಗ್ರಾಮದ ಯಜಮಾನಿಕೆ, ರಾಯಭಾರ, ಮಠಗಳ ಆಡಳಿತ, ಸುಳ್ಳುಹೇಳುವಿಕೆ, ಸಾಕ್ಷಿಹೇಳುವಿಕೆ, ಪರಾನ್ನ ಭೋಜನ, ಬ್ರಾಹ್ಮಣದ್ವೇಷ, ದುಷ್ಟಜನರ ಸಹವಾಸ, ಪ್ರಾಣಿಗಳಲ್ಲಿ ಕರುಣೆಯಿಲ್ಲದಿರುವಿಕೆ - ಇವುಗಳು ಎಲೈ ಪಶುಪತಿಯೆ, ನನಗೆ ಜನ್ಮಜನ್ಮಾಂತರಗಳಲ್ಲಿಯೂ ಸಂಭವಿಸದೆ ಇರಲಿ " ಎಂದು ಅರ್ಥ.

## ವಿವರಣೆ

ಈ ಶ್ಲೋಕದಲ್ಲಿ ಅನಿವಾರ್ಯವಾಗಿ ಪಾಪಸಂಘಟನೆಯಾಗಬಹುದಾದ ಕೆಲವು ಜೀವನವೃತ್ತಿಗಳು ಯಾವ ಜನ್ಮದಲ್ಲಿಯೂ ತನಗೆ ಒದಗಬಾರದೆಂದು ಸಾಧಕನು ಕೇಳಿಕೊಳ್ಳುತ್ತಿದಾನೆ. ಇವುಗಳಲ್ಲಿ ಮೊದಲನೆಯದು ಪೌರೋಹಿತ್ಯವು. ಇದು ನಿಜವಾಗಿಯೂ ಪಾಪವೃತ್ತಿಯಲ್ಲ. ಹಿಂದಿನ ಕಾಲದಲ್ಲಿ ವಸಿಷ್ಠರು, ಯಾಜ್ಞವಲ್ಕ್ಯರು, ಧೌಮ್ಯರು- ಮುಂತಾದ ಮಹನೀಯರೆಲ್ಲ ಪುರೋಹಿತರಾಗಿದ್ದರು. ಇದು ನಿಜ. ಆದರೆ ಈ ಕಲಿಗಾಲದಲ್ಲಿ ಮಾತ್ರ ಪೌರೋಹಿತ್ಯವು ಪಾಪಸಂಘಟನೆಗೇ ಕಾರಣವಾಗಿದೆ. ಪುರೋಹಿತನು ಬೇರೆಯವರಿಗೆ ಕರ್ಮಗಳನ್ನು ಮಾಡಿಸುವ ಗಡಿಬಿಡಿಯಲ್ಲಿ ತಾನು ಮಾಡಲಾಗುವದಿಲ್ಲ. ಬೇರೆಯವರ ಮನೆಯ ದೇವರ ಪೂಜೆಯನ್ನು ಮಾಡುತ್ತಾ ತನ್ನ ಮನೆದೇವರನ್ನು ಉಪವಾಸಕೂಡಿಸಿರುತ್ತಾನೆ. ಇನ್ನು ಮಂತ್ರಗಳಾಗಲಿ, ವಿಧಿಗಳಾಗಲಿ ತಿಳಿಯದ ಹಾಗೂ ಬ್ರಾಹ್ಮಣ್ಯ ಕರ್ಮಭ್ರಷ್ಟನಾದವನಿಗೆ ಕರ್ಮಗಳನ್ನು ಮಾಡಿಸುತ್ತಾನೆ. ದುರ್ದಾನಗಳನ್ನು ಸ್ವೀಕರಿಸಬೇಕಾಗುತ್ತದೆ. ಗೃಹಸ್ಥನ ಮನವೊಲಿಸಲು ಕರ್ಮಲೋಪಮಂತ್ರ ಲೋಪಾದಿಗಳನ್ನು ಮಾಡುತ್ತಾನೆ. ಜಿಪುಣನಾದ ಗೃಹಸ್ಥನಿಂದ ದಕ್ಷಿಣೆಯನ್ನು ವಸೂಲುಮಾಡಲು ಏನಾದರೂ ಸುಳ್ಳುನೆಪಗಳನ್ನು ಹೇಳಬೇಕಾಗುತ್ತದೆ. ಇಷ್ಟಾದರೂ ಆ ಪುರೋಹಿತನನ್ನು ಯಾರೂ ಗೌರವಿಸುವದಿಲ್ಲ. ಆತ್ಮಗೌರವವಾಗಲಿ ವೃತ್ತಿ ಗೌರವವಾಗಲಿ ಇಲ್ಲದ ಜೀವನವೇಕೆ ಬೇಕು? ಅದಕ್ಕಾಗಿ ಇಂಥ ವೃತ್ತಿಯನ್ನು ನಿವಾರಿಸುವಂತೆ ಕೇಳಲಾಗಿದೆ. ಹಾಗೆಯೇ "**ರಜನಿಚರಿತ**"ವನ್ನೂ ಬೇಡವೆಂದಿದೆ. ಈ ಮಾತಿನ ಸರಿಯಾದ ಅರ್ಥವು ನನಗೆ ತಿಳಿದಿಲ್ಲ. ಆದ್ದರಿಂದ ರಾತ್ರಿಯಲ್ಲಿ ಮಾಡುವ ಕೆಲಸ ಅಥವಾ ಸಂಚಾರ-ಎಂದರ್ಥಮಾಡಿದೆ. ದೇವತಾಕರ್ಮಗಳೆಲ್ಲವೂ ಹಗಲಿನಲ್ಲೇ ನಡೆಯಬೇಕು. ರಾತ್ರಿ ಮಾಡುವದೆಲ್ಲ ರಾಕ್ಷಸರಿಗೂ ಭೂತಪ್ರೇತಪಿಶಾಚಿಗಳಿಗೂ ಸೇರುತ್ತದೆ. ಇಂಥ ಕೆಲವು ವಾಮಾಚಾರದ ಕರ್ಮಗಳನ್ನು ರಜನಿಚರಿತವೆನ್ನಬಹುದು. ರಾತ್ರಿಯಲ್ಲಿ ಸಂಚಾರಮಾಡುವದೂ ಸರಿಯಲ್ಲ. ಅದು ರಾಕ್ಷಸರ ಹಾಗೂ ಕಳ್ಳಕಾಕರ ವೇಳೆಯಾಗಿರುವದು. ಆದ್ದರಿಂದ ಅಂಥ ಸಂದರ್ಭಗಳುಳ್ಳ ಕರ್ಮಗಳೂ ಬೇಡ- ಎಂದು ಅರ್ಥ. ಇನ್ನು ಒಂದು ಗ್ರಾಮದ ಯಜಮಾನನಾಗಿರುವದು. ಇದು ಕೂಡ ಒಳ್ಳೆಯದಲ್ಲ. ಇದನ್ನು ಎಷ್ಟೇ ನಿಃಸ್ಪೃಹತೆಯಿಂದಲೂ ಎಚ್ಚರಿಕೆಯಿಂದಲೂ ಮಾಡಲು ಹೊರಟರೂ ಪಕ್ಷಪಾತ, ನಿಷ್ಠೂರಗಳು ಸಂಭವಿಸುತ್ತವೆ. ಕೆಲವು ವೇಳೆ ನ್ಯಾಯಧರ್ಮಗಳಿಗೆ ವಿರುದ್ಧವಾಗಿ

ನಡೆಯಬೇಕಾಗುತ್ತದೆ. ಆದ್ದರಿಂದ ಇದು ಕೂಡ ತನಗೆ ಒದಗದೆ ಇರಲಿ-ಎಂದು ಕೇಳಲಾಗಿದೆ. ಅನಂತರ ನಿಯೋಗವು. ಇದು ಒಂದು ರೀತಿಯಲ್ಲಿ ಬೇರೊಬ್ಬರಿಗಾಗಿ ತಾನು ಮಾಡುವ ಕೆಲಸವು. ಇದನ್ನು ಸರಿಯಾಗಿ ನಿರ್ವಹಿಸದೆ ಇದ್ದರೆ ಯಜಮಾನನಿಗೆ ತೊಂದರೆಯಾಗುತ್ತದೆ. ಕೆಲವು ಸಂದರ್ಭದಲ್ಲಿ ಈ ಪ್ರತಿನಿಧಿಯನ್ನೇ ವಿರೋಧಿಗಳು ಹಿಂಸಿಸಲೂಬಹುದು. ಉದಾಹರಣೆಗೆ ಲಂಕೆಯಲ್ಲಿ ಸುಗ್ರೀವನ ಪ್ರತಿನಿಧಿಯಾದ ಹನುಮಂತನಿಗೇ ತೊಂದರೆಯನ್ನು ಕೊಡಲಾಯಿತು. ಆದ್ದರಿಂದ ಇದು ಕೂಡ ಬೇಡವೆಂದಿದೆ. ಹಾಗೇಯೇ ಮಾಠಾಪತ್ಯವು. ಮಠಗಳ ಆಡಳಿತಜವಾಬ್ದಾರಿಯು ಕೂಡ ದುರಾಸೆಗೂ ಪಾಪಸಂಘಟನೆಗೂ ಆಯಾ ಗುರುಪೀಠದ ಪ್ರತಿನಿಧಿಗಳ ಕೋಪತಾಪಗಳಿಗೂ ಕಾರಣವಾಗುತ್ತದೆ. ಚಾಡಿಹೇಳುವ ಜನರ ಮಾತಿನಿಂದ ವೈಮನಸ್ಯವು ಬೆಳೆಯುತ್ತದೆ. ಹೀಗಾಗಿ ಈಶ್ವರನ ಚಿಂತನೆಗೆ ಅವಕಾಶವಾಗುವದಿಲ್ಲ. ಆದ್ದರಿಂದ ಅದು ಕೂಡ ಬೇಡವೆನ್ನಲಾಗಿದೆ. ಇನ್ನು ಸುಳ್ಳುಹೇಳುವದಂತೂ ಅತಿ ಹೆಚ್ಚಿನ ಪಾಪವಾಗಿದೆ. ಹಾಗೆಯೇ ಕೋರ್ಟಿನಲ್ಲಿ ಸಾಕ್ಷಿಯನ್ನು ಹೇಳುವದು ಕೂಡ ಪಾಪಕರವಾಗಿರುತ್ತದೆ. ನಿಜವಾದ ವಿಷಯವನ್ನೇ ಸಾಕ್ಷಿಯಾಗಿ ಹೇಳಿದರೂ ಅಪ್ರಿಯವಾದ ಸತ್ಯವನ್ನು ನುಡಿದಂತಾಗುವದು. ಇನ್ನು ಸುಳ್ಳುಸಾಕ್ಷಿಯನ್ನು ಹೇಳಿದರೆ ಏನಾಗಬಹುದು? ಮತ್ತು ಪರಾನ್ನಭೋಜನವೂ ಪಾಪಕರವು. ನಾವು ಯಾರ ಮನೆಯ ಅನ್ನವನ್ನು ತಿನ್ನುವೆವೊ ಅವರ ಪಾಪವನ್ನೇ ಉಣ್ಣುತ್ತೇವೆಂದು ಶಾಸ್ತ್ರವಿದೆ. ಆದ್ದರಿಂದ ಅದು ಕೂಡ ಸಂಘಟಿಸದೆ ಇರಲಿ-ಎಂದು ಕೇಳಲಾಗಿದೆ. ಹಾಗೆಯೇ ಬ್ರಹ್ಮದ್ವೇಷವು. ಇದು ಬ್ರಾಹ್ಮಣದ್ವೇಷ, ವೇದಶಾಸ್ತ್ರಾದಿಗಳ ವಿಷಯಕ್ಕೆ ದ್ವೇಷ-ಎರಡೂ ಆಗಬಹುದು. ಇಂಥ ಸ್ಥಿತಿಯು ಮನುಷ್ಯನನ್ನು ಅಧೋಗತಿಗೇ ತಳ್ಳುತ್ತದೆ. ಮತ್ತು ದುಷ್ಟ ಜನರ ಸಹವಾಸವು ಕೂಡ ಮಾನವನ ಅವನತಿಗೆ ಕಾರಣವಾಗಿದೆ. ಕಡೆಯದಾಗಿ ಪ್ರಾಣಿಗಳಲ್ಲಿ ದಯೆಯಿಲ್ಲದೆ ಇರುವಿಕೆಯು. ಹೀಗೆ ಯಾವ ಯಾವ ಕರ್ಮವು ಹಾಗೂ ಸನ್ನಿವೇಶವು ಪರಮೇಶ್ವರನ ಭಕ್ತಿಗೂ ಅವನ ಆರಾಧನೆಗೂ ಅಡ್ಡಿಯಾಗಬಹುದೋ ಅಂಥವುಗಳು ಜನ್ಮಜನ್ಮಾಂತರಗಳಲ್ಲಿಯೂ ನನಗೆ ಒದಗದೆ ಇರಲಿ- ಎಂದು ಪ್ರಾರ್ಥಿಸಲಾಗಿದೆ.

**ಆಯುರ್ನಶ್ಯತಿ ಪಶ್ಯತಾಂ ಪ್ರತಿದಿನಂ ಯಾತಿ ಕ್ಷಯಂ ಯೌವನಂ**
**ಪ್ರತ್ಯಾಯಾಂತಿ ಗತಾಃ ಪುನರ್ನ ದಿವಸಾಃ ಕಾಲೋ ಜಗದ್ಭಕ್ಷಕಃ ।**
**ಲಕ್ಷ್ಮೀಸ್ತೋಯತರಂಗಭಂಗಚಪಲಾ ವಿದ್ಯುಚ್ಚಲಂ ಜೀವಿತಂ**
**ತಸ್ಮಾನ್ಮಾಂ ಶರಣಾಗತಂ ಕರುಣಯಾ ತ್ವಂ ರಕ್ಷ ರಕ್ಷಾಧುನಾ ।।೧೫।।**

೧೫. “ ಪ್ರತಿದಿನವೂ ನಾವು ಕಾಣುವಂತೆ ಆಯಸ್ಸು ನಾಶವಾಗುತ್ತಿರುವದು. ಯೌವನವು ಕುಗ್ಗುತ್ತಿರುವದು. ಕಳೆದುಹೋದ ದಿನಗಳು ಮತ್ತೆ ಬರಲಾರವು. ಕಾಲನು ಜಗತ್ತನ್ನೇ ನುಂಗುವವನಾಗಿದ್ದಾನೆ. ಐಶ್ವರ್ಯಲಕ್ಷ್ಮಿಯು ನೀರಿನ ಮೇಲಿನ ಅಲೆಯಂತೆ ಚಂಚಲಳಾಗಿರುವಳು. ಜೀವನವು ಮಿಂಚಿನ ತೋರಿಕೆಯಂತೆ

ಕಾಣೆಸಿಕೊಂಡು ಇಲ್ಲವಾಗುತ್ತಿರುವದು. ಆದ್ದರಿಂದ ಶರಣಾಗತನಾದ ನನ್ನನ್ನು ಕರುಣೆಯಿಟ್ಟು ಎಲೈ ಶಿವನೆ, ನೀನು ಈಗ ಕಾಪಾಡುವವನಾಗು " ಎಂದರ್ಥ.

## ವಿವರಣೆ

ಈ ಪದ್ಯದಲ್ಲಿ ಜೀವನದ ಅನಿತ್ಯತ್ವವನ್ನೂ ಅಸ್ಥಿರತೆಯನ್ನೂ ಪ್ರಸ್ತಾಪಿಸಿ ತನ್ನನ್ನು ಕಾಪಾಡಬೇಕೆಂದು ಮಹಾದೇವನನ್ನು ಪ್ರಾರ್ಥಿಸಲಾಗಿದೆ. ಮನುಷ್ಯನ ಆಯುಸ್ಸು ಹಗಲುರಾತ್ರಿಗಳೆಂಬ ಬಳ್ಳಗಳಿಂದ ಅಳೆಯಲ್ಪಟ್ಟು ಖಾಲಿ ಮಾಡಲ್ಪಡುತ್ತಿದೆ. ಪ್ರತಿದಿನವೂ ಆಯುಸ್ಸು ಹಸಿಯಮಡಕೆಯಲ್ಲಿರುವ ನೀರಿನಂತೆ ಸೋರಿಹೋಗುತ್ತಿದೆ. ಅದೇ ಕಾರಣದಿಂದ ಯೌವನವೂ ಕ್ಷಯವಾಗುತ್ತಿದೆ. ಹೀಗೆ ಜೀವನವು ಸಾಗುತ್ತಿದ್ದರೂ ಮನುಷ್ಯನಿಗೆ ಅದರ ಪರಿವೆಯೇ ಇರುವದಿಲ್ಲ. ಕೆಲವರಿಗೆ ಕಾಲವನ್ನು ಕಳೆಯುವದೇ ಕಷ್ಟವಾಗಿದ್ದು ಉದ್ಯೋಗವೇ ಇಲ್ಲದೆ ಸುಮ್ಮನೆ ಕುಳಿತೊ, ಹರಟೆಹೊಡೆಯುತ್ತಲೊ, ತಿರುಗಾಡುತ್ತಲೋ ಆಟವಾಡುತ್ತಲೋ ಸಮಯವನ್ನು ಕೊಲ್ಲುತ್ತಿರುವರು. ನಿಜವಾಗಿ ನೋಡಿದರೆ ಕಾಲವು ಎಷ್ಟು ಅಮೂಲ್ಯವಾದದ್ದು? ಅದನ್ನು ದೇವರ ಧ್ಯಾನ-ಪೂಜಾದಿಗಳಲ್ಲಿಯೋ ಸದ್ಗ್ರಂಥಾವಲೋಕನಸತ್ಸಂಗಾದಿಗಳಲ್ಲಿಯೋ ವಿನಿಯೋಗಿಸಬಾರದೇಕೆ? ಎನಿಸುವದು. ಕಳೆದುಹೋದ ದಿನಗಳಂತೂ ಮತ್ತೆ ಬರಲಾರವು. ಯಾವನೂ ತನ್ನ ಆಯಸ್ಸಿನ ಚಕ್ರವನ್ನು ಹಿಂದಿರುಗಿಸಲಾರನು. ಕೆಲವು ಹೆಣ್ಣುಮಕ್ಕಳಿಗೆ ಮದುವೆಯ ವಯಸ್ಸು ಮೀರದಿರಲೆಂದು ನಿಜವಾದ ವಯಸ್ಸನ್ನು ಹಿಂದಕ್ಕೆ ಹಾಕಿ ಕಡಿಮೆ ವಯಸ್ಸಿಗೆ ಜಾತಕಗಳನ್ನು ಬರೆಯಿಸುವದುಂಟು. ಹಾಗೆಂದಮಾತ್ರಕ್ಕೆ ಕಳೆದುಹೋದ ಯೌವನವು ಹಿಂದಿರುಗಿ ಬಂದೀತೆ? ಆದ್ದರಿಂದ ಹಣಕ್ಕಿಂತಲೂ ಕಾಲವು ಬಹಳ ಬೆಲೆಯುಳ್ಳದ್ದು. ವ್ಯವಹಾರಪ್ರಪಂಚದಲ್ಲಿ ಕೆಲವು ಜನರಿಗೆ ೨೪ ಘಂಟೆ ಕಾಲವು ಸಾಲದು. ಮತ್ತೆ ಕೆಲವರಿಗೆ ಕಾಲವು ಸಾಗುವದೇ ಕಷ್ಟವಾಗಿರುವದು. ಹಾಗೆಂದಮಾತ್ರಕ್ಕೆ ಅದನ್ನು ಹಣದಂತೆ ಕೊಂಡುಕೊಳ್ಳುವದೂ ಆಗಲಾರದು. ಇಂಥ ಕಾಲವು ವ್ಯರ್ಥವಾದರೆ ಪಶ್ಚಾತ್ತಾಪವಾಗದೆ ಇದ್ದೀತೆ? ಇನ್ನು ಕಾಲಪುರುಷನ ಸ್ವಭಾವವೇನೆಂದರೆ: ಅವನು ಜಗತ್ತನ್ನೇ ನುಂಗುವವನಾಗಿರುತ್ತಾನೆ. ಪ್ರಪಂಚದಲ್ಲಿರುವ ಎಲ್ಲಾ ಪ್ರಾಣಿಗಳೂ ಕಾಲನ ಅಧೀನದಲ್ಲಿರುವವು. ಅಂದರೆ ಕಾಲದಲ್ಲಿ ಹುಟ್ಟಿ, ಕಾಲದಲ್ಲಿ ಬೆಳೆದು, ಕಾಲದಲ್ಲಿ ಅಡಗುವವು. ಆದ್ದರಿಂದ ಕಾಲನ ಆಡಳಿತದಲ್ಲಿ ಮನುಷ್ಯನ ಜೀವಮಾನವು ತೀರ ಅತ್ಯಲ್ಪವಾಗಿರುವದು. ಅದುಕೂಡ ನಿದ್ರೆ, ರೋಗಾದಿಗಳು, ಬಾಲ್ಯ, ವಾರ್ಧಕ್ಯ - ಮುಂತಾದ ರೀತಿಯಿಂದ ಹಂಚಿಹೋಗಿ ತನ್ನ ಆತ್ಮಜ್ಞಾನ ಹಾಗೂ ಸಾಧನೆಗಳಿಗೆ ತೀರ ಸ್ವಲ್ಪವೇ ಉಳಿಯುವದು. ಇದುಕೂಡ ಆತಂಕಕಾರಣವಾಗಿರುವದು. ಹಾಗಾದರೆ ಜೀವನದಲ್ಲಿ ನೆಮ್ಮದಿಯನ್ನು ಕೊಡುವದು ಯಾವದು? ಹಣವಿರಬಹುದೆ? ಎಂದರೆ ಅದೂ ಅಲ್ಲ. ಹಣ, ಮನೆ, ಅಧಿಕಾರ, ಚಿನ್ನಬೆಳ್ಳಿಗಳು ಕೂಡ ಶಾಶ್ವತವಲ್ಲ. ಅವು ಬಂದರೂ ಕೆಲವೇ ಕಾಲದವರೆಗೆ ಇದ್ದು ಕಣ್ಮರೆಯಾಗಿಬಿಡುವವು. ಸಂಪಲ್ಲಕ್ಷ್ಮಿಯು ಸಮುದ್ರದಲ್ಲಿ ಏಳುತ್ತಿರುವ ನೀರಿನ ಮೇಲಿನ

ಅಲೆಯಂತೆ ಎದ್ದು ಬಂದು ಪುನಃ ನೋಡುವದರಲ್ಲಿಯೇ ಮರೆಯಾಗಿಬಿಡುವಳು. ಇಷ್ಟು ಚಂಚಲವಾದ ಐಹಿಕಸಂಪತ್ತು ಹೇಗೆ ತಾನೆ ಮನುಷ್ಯನನ್ನು ಉದ್ಧಾರಮಾಡೀತು? ಇನ್ನು ಬದುಕನ್ನು ವಿಚಾರಿಸೋಣ. ಆಯುಷ್ಯವೇ ಬದುಕೆನಿಸುವದು. ಆದರೆ ತನ್ನ ಆಯುಷ್ಯವು ಇಂತಿಷ್ಟೆಂದು ಯಾವನೊಬ್ಬನೂ ಕಂಡುಕೊಂಡಿರುವದಿಲ್ಲ. ಅದು ಯಾವಾಗ ಮುಗಿಯುತ್ತದೆಯೋ ತಿಳಿಯದು. ಮಳೆಗಾಲದಲ್ಲಿ ಆಕಾಶದಲ್ಲಿ ಕವಿದಿರುವ ಕಪ್ಪು ಮೋಡದ ನಡುವೆ ಕ್ಷಣಕಾಲ ಥಳಾರನೆ ಹೊಳೆದು ಕಣ್ಮರೆಯಾಗುವ ಮಿಂಚಿನಂತೆ ಆಯುಷ್ಯವೂ ಅಶಾಶ್ವತವಾಗಿರುವದು. ಹೀಗೆ ಜೀವನದ ಅಸ್ಥಿರತೆಯು ನನಗೆ ಬಹಳ ದುಃಖವನ್ನುಂಟುಮಾಡಿದೆಯೆಂದು ಸಾಧಕನು ತಿಳಿಸುತ್ತಿದ್ದಾನೆ.

ಆದ್ದರಿಂದ ಪರಮೇಶ್ವರನೇ ಈ ಪರಿಸ್ಥಿತಿಯಲ್ಲಿ ತನ್ನನ್ನು ಕಾಪಾಡಬೇಕೆಂದು ಭಕ್ತನು ಪ್ರಾರ್ಥಿಸುತ್ತಿದ್ದಾನೆ. ಆ ಭಗವಂತನಾದರೂ, ಶರಣಾಗತರನ್ನು ಕಾಪಾಡುವವನು. ಕಾರುಣ್ಯವುಳ್ಳವನು. ಕಾಲಕಾಲನು. ಅವನನ್ನು ಯಾವ ಕಾಲದೇವತೆಯೂ ವಶಪಡಿಸಿಕೊಳ್ಳಲಾರನು. ಇಂಥ ಮೃತ್ಯುಂಜಯನೂ ಮಹಾದೇವನೂ ಸರ್ವಲೋಕಗಳಿಗೂ ಶುಭವನ್ನುಂಟುಮಾಡುವವನೂ ಆದ ಪರಮೇಶ್ವರನೆನಿಸಿದ ಭಗವಂತನು ನನ್ನನ್ನು ಕಾಪಾಡಲಿ. ಆತನಿಗೆ ನಾನು ಶರಣಾಗತನಾಗಿರುವೆನು-ಎಂದು ಬೇಡಿಕೊಂಡು ಭಕ್ತನು ಶಿವನನ್ನು ಮೊರೆಹೊಕ್ಕಿರುತ್ತಾನೆ. ಶಿವನು ಸರ್ವರಿಗೂ ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸಿ ಈ ವಿವರಣೆಯನ್ನು ಪೂರ್ಣಗೊಳಿಸಲಾಗಿದೆ.

ಇತಿ ಶ್ರೀ ಶಿವಾಪರಾಧಕ್ಷಮಾಪಣಸ್ತೋತ್ರಂ ಸಂಪೂರ್ಣಮ್

ಓಂ ತತ್ಸತ್

*****

# ಶ್ರೀ ಶಿವಾಪರಾಧಕ್ಷಮಾಪಣಸ್ತೋತ್ರಮ್

## (ಮೂಲ)

ಆದೌ ಕರ್ಮಪ್ರಸಂಗಾತ್ ಕಲಯತಿ ಕಲುಷಂ ಮಾತೃಕುಕ್ಷೌ ಸ್ಥಿತಂ ಮಾಂ
ವಿಣ್ಮೂತ್ರಾಮೇಧ್ಯಮಧ್ಯೇ ಕ್ವಥಯತಿ ನಿತರಾಂ ಜಾಠರೋ ಜಾತವೇದಾಃ ।
ಯದ್ಯದ್ವೈ ತತ್ರ ದುಃಖಂ ವ್ಯಥಯತಿ ನಿತರಾಂ ಶಕ್ಯತೇ ಕೇನ ವಕ್ತುಂ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ ಶ್ರೀ ಮಹಾದೇವ ಶಂಭೋ ॥೧॥

ಬಾಲ್ಯೇ ದುಃಖಾತಿರೇಕಾನ್ಮಲಲುಲಿತವಪುಃ ಸ್ತನ್ಯಪಾನೇ ಪಿಪಾಸುಃ
ನೋ ಶಕ್ತಶ್ಚೇಂದ್ರಿಯೇಭ್ಯೋ ಭವಮಲಜನಿತಾ ಜಂತವೋ ಮಾಂ ತುದಂತಿ ।
ನಾನಾರೋಗಾತಿದುಃಖಾದ್ರುದನಪರವಶಃ ಶಂಕರಂ ನ ಸ್ಮರಾಮಿ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ ಶ್ರೀ ಮಹಾದೇವ ಶಂಭೋ ॥೨॥

ಪ್ರೌಢೋಽಹಂ ಯೌವನಸ್ಥೋ ವಿಷಯವಿಷಧರೈಃ ಪಂಚಭಿರ್ಮರ್ಮಸಂಧೌ
ದಷ್ಟೋ ನಷ್ಟೋ ವಿವೇಕಃ ಸುತಧನಯುವತಿಸ್ವಾದುಸೌಖ್ಯೇ ನಿಷಣ್ಣಃ ।
ಶೈವೇ ಚಿಂತಾವಿಹೀನಂ ಮಮ ಹೃದಯಮಹೋ ಮಾನಗರ್ವಾಧಿರೂಢಂ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ ಶ್ರೀ ಮಹಾದೇವ ಶಂಭೋ ॥೩॥

ವಾರ್ಧಕ್ಯೇ ಚೇಂದ್ರಿಯಾಣಾಂ ವಿಕಲಗತಿಮತಃ ಚಾಧಿದೈವಾದಿತಾಪೈಃ
ಪ್ರಾಪ್ತೈ ರೋಗೈರ್ವಿಯೋಗೈಃ ವ್ಯಸನಕೃಶತನೋಃ ಜ್ಞಪ್ತಿಹೀನಂ ಚ ದೀನಮ್ ।
ಮಿಥ್ಯಾಮೋಹಾಭಿಲಾಷೈಃ ಭ್ರಮತಿ ಮಮ ಮನೋ ಧೂರ್ಜಟೇರ್ಧ್ಯಾನಶೂನ್ಯಂ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ ಶ್ರೀ ಮಹಾದೇವ ಶಂಭೋ ॥೪॥

ಸ್ನಾತ್ವಾ ಪ್ರತ್ಯೂಷಕಾಲೇ ಸ್ನಪನವಿಧಿವಿಧೌ ನಾಹೃತಂ ಗಾಂಗತೋಯಂ
ಪೂಜಾರ್ಥಂ ವಾ ಕದಾಚಿದ್ ಬಹುತರಗಹನೇಽಖಂಡಬಿಲ್ವೀದಳಂ ವಾ ।
ನಾನೀತಾ ಪದ್ಮಮಾಲಾ ಸರಸಿ ವಿಕಸಿತಾ ಗಂಧಪುಷ್ಪೈಸ್ತ್ವದರ್ಥಂ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ ಶ್ರೀ ಮಹಾದೇವ ಶಂಭೋ ॥೫॥

ದುಗ್ಧೈಃ ಮಧ್ವಾಜ್ಯಯುಕ್ತೈರ್ದಧಿಗುಡಸಹಿತೈಃ ಸ್ನಾಪಿತಂ ನೈವ ಲಿಂಗಂ

ನೋ ಲಿಪ್ತಂ ಚಂದನಾದ್ಯೈಃ ಕನಕವಿರಚಿತೈಃ ಪೂಜಿತಂ ನ ಪ್ರಸೂನೈಃ ।
ಧೂಪೈಃ ಕರ್ಪೂರದೀಪೈರ್ವಿವಿಧರಸಯುತೈರ್ನೈವ ಭಕ್ಷ್ಯೋಪಹಾರೈಃ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ ಶ್ರೀ ಮಹಾದೇವ ಶಂಭೋ ॥೬॥

ನೋ ಶಕ್ಯಂ ಸ್ಮಾರ್ತಕರ್ಮ ಪ್ರತಿಪದಗಹನೇ ಪ್ರತ್ಯವಾಯಾಕುಲಾಢ್ಯೇ
ಶ್ರೌತೇ ವಾರ್ತಾ ಕಥಂ ಮೇ ದ್ವಿಜಕುಲವಿಹಿತೇ ಬ್ರಹ್ಮಮಾರ್ಗಾನುಸಾರೇ ।
ತತ್ತ್ವೇ ಜ್ಞಾತೇ ವಿಚಾರೇ ಶ್ರವಣಮನನಯೋಃ ಕಿಂ ನಿದಿಧ್ಯಾಸಿತವ್ಯಂ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ ಶ್ರೀ ಮಹಾದೇವ ಶಂಭೋ ॥೭॥

ಧ್ಯಾತ್ವಾ ಚಿತ್ತೇ ಶಿವಾಖ್ಯಂ ಪ್ರಚುರತರಧನಂ ನೈವ ದತ್ತಂ ದ್ವಿಜೇಭ್ಯೋ
ಹವ್ಯಂ ತೇ ಲಕ್ಷಸಂಖ್ಯೈಃ ಹುತವಹವದನೇ ನಾರ್ಪಿತಂ ಬೀಜಮಂತ್ರೈಃ ।
ನೋ ತಪ್ತಂ ಗಾಂಗತೀರೇ ವ್ರತಜಪನಿಯಮೈಃ ರುದ್ರಜಾಪ್ಯಂ ನ ಜಪ್ತಂ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ ಶ್ರೀ ಮಹಾದೇವ ಶಂಭೋ ॥೮॥

ನಗ್ನೋ ನಿಃಸಂಗಶುದ್ಧ ಸ್ತ್ರಿಗುಣವಿರಹಿತೋ ಧ್ವಸ್ತ ಮೋಹಾಂಧಕಾರೋ
ನಾಸಾಗ್ರೇ ನ್ಯಸ್ತದೃಷ್ಟಿರ್ವಿದಿತಭವಗುಣೋ ನೈವ ದೃಷ್ಟಃ ಕದಾಚಿತ್ ।
ಉನ್ಮನ್ಯಾವಸ್ಥಯಾ ತ್ವಾಂ ವಿಗತಗತಿಮತಿಃ ಶಂಕರಂ ನ ಸ್ಮರಾಮಿ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ ಶ್ರೀ ಮಹಾದೇವ ಶಂಭೋ ॥೯॥

ಸ್ಥಿತ್ವಾ ಸ್ಥಾನೇ ಸರೋಜೇ ಪ್ರಣವಮಯಮರುತ್ಕುಂಭಿತೇ ಸೂಕ್ಷ್ಮಮಾರ್ಗೇ
ಶಾಂತೇ ಸ್ವಾಂತೇ ಪ್ರಲೀನೇ ಪ್ರಕಟಿತವಿಭವೇ ದಿವ್ಯರೂಪೇ ಶಿವಾಖ್ಯೇ ।
ಲಿಂಗಾಗ್ರೇ ಬ್ರಹ್ಮವಾಕ್ಯೇ ಸಕಲತನುಗತಂ ಶಂಕರಂ ನ ಸ್ಮರಾಮಿ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ ಶ್ರೀ ಮಹಾದೇವ ಶಂಭೋ ॥೧೦॥

ಹೃದ್ಯಂ ವೇದಾಂತವೇದ್ಯಂ ಹೃದಯಸರಸಿಜೇ ದೀಪ್ತಮುದ್ಯತ್ ಪ್ರಕಾಶಂ
ಸತ್ಯಂ ಶಾಂತಸ್ವರೂಪಂ ಸಕಲಮುನಿಮನಃಪದ್ಮಷಂಡೈಕವೇದ್ಯಮ್ ।
ಜಾಗ್ರತ್ ಸ್ವಪ್ನೇ ಸುಷುಪ್ತೌ ತ್ರಿಗುಣವಿರಹಿತಂ ಶಂಕರಂ ನ ಸ್ಮರಾಮಿ
ಕ್ಷಂತವ್ಯೋ ಮೇಽಪರಾಧಃ ಶಿವ ಶಿವ ಶಿವ ಭೋಃ ಶ್ರೀ ಮಹಾದೇವ ಶಂಭೋ ॥೧೧॥

ಚಂದ್ರೋದ್ಭಾಸಿತಶೇಖರೇ ಸ್ಮರಹರೇ ಗಂಗಾಧರೇ ಶಂಕರೇ

ಸರ್ಪೈರ್ಭೂಷಿತಕಂಠಕರ್ಣವಿವರೇ ನೇತ್ರೋತ್ಥವೈಶ್ವಾನರೇ ।
ದಂತಿತ್ವಕ್ಕೃತಸುಂದರಾಂಬರಧರೇ ತ್ರೈಲೋಕ್ಯಸಾರೇ ಹರೇ
ಮೋಕ್ಷಾರ್ಥಂ ಕುರು ಚಿತ್ತವೃತ್ತಿಮಮಲಾಂ ಅನ್ಯೈಸ್ತು ಕಿಂ ಕರ್ಮಭಿಃ ॥೧೨॥

ಕಿಂ ಯಾನೇನ ಧನೇನ ವಾಜಿಕರಿಭಿಃ ಪ್ರಾಪ್ತೇನ ರಾಜ್ಯೇನ ಕಿಂ
ಕಿಂ ವಾ ಪುತ್ರಕಲತ್ರಮಿತ್ರಪಶುಭಿಃ ದೇಹೇನ ಗೇಹೇನ ಕಿಮ್ ।
ಜ್ಞಾತ್ವೈತತ್ ಕ್ಷಣಭಂಗುರಂ ಸಪದಿ ರೇ ತ್ಯಾಜ್ಯಂ ಮನೋ ದೂರತಃ
ಸ್ವಾತ್ಮಾರ್ಥಂ ಗುರುವಾಕ್ಯತೋ ಭಜ ಭಜ ಶ್ರೀ ಪಾರ್ವತೀವಲ್ಲಭಮ್ ॥೧೩॥

ಪೌರೋಹಿತ್ಯಂ ರಜನಿಚರಿತಂ ಗ್ರಾಮಣೀತ್ವಂ ನಿಯೋಗಃ
ಮಾಠಾಪತ್ಯಂ ಹ್ಯನೃತವಚನಂ ಸಾಕ್ಷಿವಾದಃ ಪರಾನ್ನಮ್ ।
ಬ್ರಹ್ಮದ್ವೇಷಃ ಖಲಜನರತಿಃ ಪ್ರಾಣಿನಾಂ ನಿರ್ದಯತ್ವಂ
ಮಾ ಭೂದೇವಂ ಮಮ ಪಶುಪತೇ ಜನ್ಮಜನ್ಮಾಂತರೇಷು ॥೧೪॥

ಆಯುರ್ನಶ್ಯತಿ ಪಶ್ಯತಾಂ ಪ್ರತಿದಿನಂ ಯಾತಿ ಕ್ಷಯಂ ಯೌವನಂ
ಪ್ರತ್ಯಾಯಾಂತಿ ಗತಾಃ ಪುನರ್ನ ದಿವಸಾಃ ಕಾಲೋ ಜಗದ್ಭಕ್ಷಕಃ ।
ಲಕ್ಷ್ಮೀಸ್ತೋಯತರಂಗಭಂಗಚಪಲಾ ವಿದ್ಯುಚ್ಚಲಂ ಜೀವಿತಂ
ತಸ್ಮಾನ್ಮಾಂ ಶರಣಾಗತಂ ಕರುಣಯಾ ತ್ವಂ ರಕ್ಷ ರಕ್ಷಾಧುನಾ ॥೧೫॥

ಇತಿ ಶ್ರೀ ಶಿವಾಪರಾಧಕ್ಷಮಾಪಣ ಸ್ತೋತ್ರಂ ಸಂಪೂರ್ಣಮ್

* * * *

# ಮಂಗಳಾಶಾಸನ

ಭೀತಿರ್ನಾಸ್ತಿ ಭುಜಂಗಪುಂಗವವಿಷಾತ್ ಪ್ರೀತಿರ್ನ ಚಂದ್ರಾಮೃತಾತ್
ನಾಶೌಚಂ ಚ ಕಪಾಲದಾಮಲುಲನಾತ್ ಶೌಚಂ ನ ಗಂಗಾಜಲಾತ್ ।
ನೋದ್ವೇಗಶ್ಚಿತಿಭಸ್ಮನಾ ನಚ ಸುಖಂ ಗೌರೀಸ್ತನಾಲಿಂಗನಾತ್
ಆತ್ಮಾರಾಮತಯಾ ಹಿತಾಹಿತಸಮಃ ಸ್ವಸ್ಥೋ ಹರಃ ಪಾತು ವಃ। ।

*****

# ಭಕ್ತಿಯ ಬುಗ್ಗೆಯನ್ನು ಉಕ್ಕೇರಿಸುವ ಸ್ತೋತ್ರಗಳು

೧. **ಶಿವಾನಂದಲಹರಿ:-** ಹೆಸರಿಗೆ ತಕ್ಕಂತೆ ಭಕ್ತರ ಹೃದಯದಲ್ಲಿ ಆನಂದದ ಹೆದ್ದೆರೆಗಳನ್ನು ಎಬ್ಬಿಸುವ ಈ ಸ್ತೋತ್ರವು- ಮೂಲ, ವಿವರಣೆ- ಸಮೇತವಾಗಿದೆ.

ಪುಟಗಳು-೭೬

೨. **ಶಿವಮಹಿಮ್ನಃಸ್ತೋತ್ರ:-** ಶಿವಭಕ್ತರಿಗೆಲ್ಲ ಪ್ರಿಯವಾಗಿರುವ ಪುಷ್ಪದಂತ ವಿರಚಿತವಾದ ಈ ಸ್ತೋತ್ರವು ಮೂಲ, ಪ್ರತಿಪದಾರ್ಥ, ತಾತ್ಪರ್ಯ, ವಿವರಣೆಗಳೊಡನೆ ಕೂಡಿದೆ.

ಪುಟಗಳು-೭೨

೩. **ಶಿವಕವಚ:-** ಮೂಲ, ಅರ್ಥ, ವಿವರಣೆ. ಇಷ್ಟೂ ಇವೆ. ಬ್ರಹ್ಮೋತ್ತರ ಖಂಡದಿಂದ ಆರಿಸಿರುವ ಈ ಸ್ತೋತ್ರವು ಸರ್ವತವೂ ಪ್ರಸಿದ್ಧವಾಗಿದೆ.

ಪುಟಗಳು-೫೬

೪. **ಶಿವನಾಮಾಷ್ಟೋತ್ತರಶತಕ:-** ಪ್ರತಿಯೊಂದು ನಾಮಕ್ಕೂ ಅರ್ಥವಿವರಣೆಯಿದೆ. ಪೂಜೆಗೆ ಉಪಯೋಗಿಸುವವರಿಗಾಗಿ ನಾಮಾವಳಿಯಿದೆ; ಪ್ರತಿದಿನದ ಪಾಠಕ್ಕೆ ಮೂಲಶ್ಲೋಕಗಳನ್ನು ಕೊಟ್ಟಿದೆ. ಸ್ಕಾಂದಪುರಾಣದಿಂದ ಆರಿಸಿದ್ದು.

ಪುಟಗಳು-೪೨

೫. **ಮುಕುಂದಮಾಲಾ:-** ಕುಲಶೇಖರಾಳ್ವಾರ್‌ರವರಿಂದ ರಚಿತವಾದ ಈ ಭಕ್ತಿಪ್ರಧಾನವಾದ ಸ್ತೋತ್ರವು ವಿಷ್ಣುಭಕ್ತರಿಗೆಲ್ಲ ಪ್ರಿಯವಾಗಿರುತ್ತದೆ. ಪಾಠಾಂತರಭಾವಾರ್ಥಸಮೇತವಾಗಿದೆ. ಬೊಂಬಾಯಿ ಪಾಠಕ್ರಮವನ್ನೂ ಕೊಟ್ಟಿದೆ.

ಪುಟಗಳು-೨೪

೬. **ಲಕ್ಷ್ಮೀನರಸಿಂಹಪಂಚರತ್ನ ಮತ್ತು ಧನ್ಯಾಷ್ಟಕ:-** ಶ್ರೀಶಂಕರಾಚಾರ್ಯರ ಕೃತಿಯೆಂದು ಪ್ರಸಿದ್ಧವಾಗಿರುವ ಈ ಸ್ತೋತ್ರದಲ್ಲಿ ಪರಮಾತ್ಮನ ಭಕ್ತಿಯನ್ನೂ ಸಾಧನ ಕ್ರಮವನ್ನೂ ವಿವರಿಸಿದೆ. ಶ್ರೀಶ್ರೀಗಳವರು ಪ್ರತಿಯೊಂದು ಶ್ಲೋಕಕ್ಕೂ ವಿಸ್ತಾರವಾದ ವಿವರಣೆಯನ್ನು ಬರೆದು ವೇದಾಂತತತ್ತ್ವಗಳನ್ನು ಸುಲಭಶೈಲಿಯಲ್ಲಿ ಜಿಜ್ಞಾಸುಗಳಿಗೆ ಉಣಬಡಿಸಿದ್ದಾರೆ. ಧನ್ಯಾಷ್ಟಕದ ಎಂಟು ಶ್ಲೋಕಗಳಿಗೂ ಭಾವಾರ್ಥವಿವರಣೆಗಳಿವೆ.

ಪುಟಗಳು-೪೮

೭. **ಶ್ರೀರಾಮಹೃದಯ:-** ಅಧ್ಯಾತ್ಮರಾಮಾಯಣದ ಮೊದಲನೆಯ ಸರ್ಗದ ಭಾಗವು ಮೂಲಸಮೇತ ಇದರಲ್ಲಿದೆ. ಸೀತಾದೇವಿಯೂ ಶ್ರೀರಾಮನೂ ಹನುಮಂತನಿಗೆ ಮಾಡಿದ ತತ್ತ್ವೋಪದೇಶದ ಭಾಗವು ಇದರಲ್ಲಿ ವಿವರಿಸಲ್ಪಟ್ಟಿದೆ. ರಾಮಭಕ್ತರಿಗೆ ಅನುಸಂಧಾನಕ್ಕೆ ತಕ್ಕ ಗ್ರಂಥ.

ಪುಟಗಳು-೨೪

೮. **ಶ್ರೀರಾಮಗೀತ:-** ಜ್ಞಾನವೊಂದೇ ಮುಕ್ತಿಗೆ ಸಾಧನವೆಂದೂ ಗುರುಮೂಲಕ ವೇದಾಂತ ಶ್ರವಣಮಾಡಿ, ಆತ್ಮಸಾಕ್ಷಾತ್ಕಾರ ಪಡೆಯಬೇಕೆಂದು ಉಪದೇಶಿಸಿರುತ್ತದೆ.

ಪುಟಗಳು-೩೬

# ಭಕ್ತಿಯ ಬುಗ್ಗೆಯನ್ನು ಉಕ್ಕೇರಿಸುವ ಸ್ತೋತ್ರಗಳು

೯. **ಗಣೇಶಾಷ್ಟಕ**:- ಗಣೇಶಪುರಾಣದಿಂದ ಆರಿಸಿದ ಸ್ತೋತ್ರ, ಪ್ರಪಂಚವೆಲ್ಲವೂ ಬ್ರಹ್ಮವೇ- ಎಂಬ ಸಿದ್ಧಾಂತವನ್ನು ಮನೋಹರ ರೀತಿಯಿಂದ ಇಲ್ಲಿ ವಿವರಿಸಿದೆ.

ಪುಟಗಳು-೩೨

೧೦. **ಭಗವಚ್ಛರಣಸ್ತೋತ್ರ**:- ಭಗವಂತನನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳುವದಕ್ಕೆ ಬೇಕಾದ ಸಾಧನಗಳನ್ನು ಸಂಗ್ರಹಿಸಿರುವ ಸ್ತೋತ್ರ. ಶ್ರೀಬ್ರಹ್ಮಾನಂದರ ಕೃತಿ.

ಪುಟಗಳು-೪೮

೧೧. **ಸ್ತುತಿಪುಷ್ಪಾಂಜಲಿ**:- ಸ್ತ್ರೀಯರು, ಬಾಲಕರುಗಳಿಗೆ ಕಂಠಪಾಠಕ್ಕೆ ಯೋಗ್ಯವಾದ ಹಾಗೂ ಹಿಂದೂ ಸಂಸ್ಕೃತಿಯ ವೈಶಿಷ್ಟ್ಯವನ್ನು ತಿಳಿಸುವ ದೇವತಾಸ್ತೋತ್ರಗಳು, ಧಾರ್ಮಿಕ ನೈತಿಕ ಉಪದೇಶಗಳುಳ್ಳ ಪದ್ಯಗಳು- ಸುಮಾರು ೮೮, ಗಾಯತ್ರೀರಾಮಾಯಣ, ವಿದುರನೀತಿ, ಭಗವತ್‌ಸ್ತೋತ್ರಗಳು, ಪ್ರಾರ್ಥನಾಮಂತ್ರಗಳು- ಇವುಗಳನ್ನು ಪ್ರತಿಪದಾರ್ಥ ಸಮೇತಕೊಡಲಾಗಿದೆ. ಈ ಗ್ರಂಥವು ಕೈಯಲ್ಲಿದ್ದರೆ ಭಾರತೀಯಸಂಸ್ಕೃತಿಯ ಪ್ರಪ್ರಥಮ ಪರಿಚಯವೇ ಕೈಯಲ್ಲಿದ್ದಂತೆ- ಎಂದು ಭಾವಿಸಬಹುದು.

ಪುಟಗಳು-೭೬

೧೨. **ಮೂಲರಾಮಾಯಣಮ್**:- ಶ್ರೀಮದ್ವಾಲ್ಮೀಕಿರಾಮಾಯಣದ ಬಾಲಕಾಂಡದ ಮೊದಲನೆಯ ಸರ್ಗವನ್ನು ಮೂಲ, ಕನ್ನಡ ಅನುವಾದ ಸಮೇತ ಕೊಡಲಾಗಿದೆ. ರಾಮಾಯಣದ ಪೂರ್ಣ ಕಥೆಯು ಸಂಕ್ಷೇಪವಾಗಿದೆ.

ಪುಟಗಳು-೨೪

೧೩. **ಸ್ತೋತ್ರಮಾಲಾ-ಭಾಗ-೧**:- ಇದರಲ್ಲಿ (೧) ಅನುಸ್ಮೃತಿ, (೨) ಗಜೇಂದ್ರಮೋಕ್ಷ, (೩) ಭೀಷ್ಮಸ್ತವರಾಜ, (೪) ಹರಿಶರಣಾಷ್ಟಕ, (೫) ಆದಿತ್ಯಹೃದಯ- ಎಂಬ ಐದು ಕೃತಿಗಳಿವೆ. ಭಾವಾರ್ಥವನ್ನೂ ವಿವರಣೆಯನ್ನೂ ಕೊಡಲಾಗಿದೆ. ವಿವರಣೆಗಳಿಲ್ಲದವುಗಳಿಗೆ ಟಿಪ್ಪಣಿಗಳನ್ನು ಕೊಡಲಾಗಿದೆ. ವಿಷ್ಣುಭಕ್ತರಿಗೆಲ್ಲ ಪ್ರಿಯವಾಗಿರುವ ಗ್ರಂಥವಿದು.

ಪುಟಗಳು-೨೪

೧೪. **ಮೋಹಮುದ್ಗರ**:- (ಭಜಗೋವಿಂದಸ್ತೋತ್ರ) ದ್ವಾದಶಮಂಜರೀ- ಚತುರ್ದಶಮಂಜರೀ- ಎಂದು ಪ್ರಸಿದ್ಧವಾಗಿರುವ ಎರಡು ಶ್ಲೋಕಗಳಿಗೂ ಭಾವಾರ್ಥಸಮೇತ ಇದರಲ್ಲಿ ಕೊಟ್ಟಿದೆ. ಕನ್ನಡಪದ್ಯಾನುವಾದವೂ ಇದೆ. ಭಜನೆಗೆ ಅನುಕೂಲವಾಗಿದೆ.

ಪುಟಗಳು-೧೬

## ಗ್ರಂಥಗಳ ಈಗಿನ ಪೂರ ಬೆಲೆಪಟ್ಟಿಗೆ ಬರೆದುಕೊಳ್ಳಿರಿ

**ಅಧ್ಯಾತ್ಮಪ್ರಕಾಶಕಾರ್ಯಾಲಯ**
೬೮, ೨ನೇ ಬ್ಲಾಕ್
ತ್ಯಾಗರಾಜನಗರ, ಬೆಂಗಳೂರು-೫೬೦೦೨೮
✆. ೬೨೫೫೪೮

**ಅಧ್ಯಾತ್ಮಪ್ರಕಾಶಕಾರ್ಯಾಲಯ**
ಹೊಳೆನರಸೀಪುರ-೫೭೩೨೧೧
ಹಾಸನ ಜಿಲ್ಲೆ
✆: ೦೮೧೭೫-೭೩೮೨೦